ಸಾವಿತ್ರಿ

ಒಂದು ಸಣ್ಣ ದೃಶ್ಯ

ಶ್ರೀನಿವಾಸನು ರಚಿಸಿದುದು

ಬೆಂಗಳೂರು:

ಬೆಂಗಳೂರು ಪ್ರೆಸ್, ಮೈಸೂರು ರೋಡ್

೧೯೩೩

[ಬೆಲೆ ೬ ಆಣೆ

సావిత్రి

ಸಾವಿತ್ರಿ

ಪಾತ್ರಗಳು

ಸಾವಿತ್ರಿ

ಸತ್ಯವಾನ

ನಾರದ

ಧರ್ಮದೇವ

ರಾಜ—ಸತ್ಯವಾನನ ತಂದೆ

ರಾಜಪತ್ನಿ— ,, ತಾಯಿ

ಅಶ್ವಪತಿ—ಸಾವಿತ್ರಿಯ ತಂದೆ

ಮಾಳವಿ— ,, ತಾಯಿ

ಶ್ರೀ

ಸಾವಿತ್ರಿ

ಒಂದು ಸಣ್ಣ ದೃಶ್ಯ

ಸ್ಥಾನ

ದ್ಯುಮತ್ಸೇನರಾಜನು ಕಾನನವಾಸದಲ್ಲಿ ಇದ್ದ ವನದ ಪ್ರದೇಶಗಳು.

(ಪ್ರವೇಶ: ನಾರದಮಹರ್ಷಿ.)

ನಾರದ.— (ವೃತ್ತ)

ಶ್ರೀನಾಥಂ ಶ್ರಿತವತ್ಸಲಂ ಪರಶಿವಂ ಕಾರುಣ್ಯಪೂರ್ಣಾಂಕಿತಂ
ದೀನಾಧಾರನುದಾರನಂಬುಜಭವಾಂಡಾನೀಕವಂ ಪಾಲಿಪಂ
ನ್ಯೂನಂಮತ್ತತಿರಿಕ್ತಮೊಂದಿನಿಸುಮೊಂದಲ್ಲಾರದಂತೆಲ್ಲವಂ
ತಾನೇ ಸೂತ್ರದಿನಾರ್ಚುವಂ ಪೊರೆಯಲೀ ಸಂಸೃಷ್ಟಿಯಂ ಸಂತತಂ ॥

ಸಾವಿತ್ರೀದೇವಿಯು ತಂದೆಯ ಬಳಿಗೆ ಹಿಂದಕ್ಕೆ ಬಂದು ತಾನು ಸತ್ಯವಾನನನ್ನು ವರಿಸಿರುವುದಾಗಿ ಹೇಳಿ ಇಂದಿಗೆ ಒಂದು ವರುಷ. ನಾನು ಆ ಸಮಯದಲ್ಲಿ ಅಲ್ಲಿ ಇದ್ದದ್ದು ಒಳ್ಳೆಯದಾಯಿತೋ ಇಲ್ಲವೋ ನನಗೆ ತೋರದೇ ಇದೆ. ಒಂದು ವೇಳೆ ಇರದೇ ಇದ್ದಿದ್ದರೆ ತಾನೇ ಏನು? ಈ ಮದುವೆಯಂತೂ ನಡೆಯುತ್ತಿತ್ತು. ಈಗ ಯಾವ ಪರಿಣಾಮವೋ ಅದೇ ಆಗಲೂ ಅದನ್ನು ಕಾಯುತ್ತಿತ್ತು. ಸತ್ಯವಾನನ ಆಯುಃಪ್ರಮಾಣವು ಕಡಿಮೆಯೆಂದು ನನಗೆ ತಿಳಿದಿದ್ದು ಆದ

ಉಪಯೋಗವೇನು ಎಂದು ಮಾತ್ರ ಒಂದೊಂದು ಸಲ ವ್ಯಸನ ವಾಗುತ್ತದೆ. ನಾನು ಅಲ್ಲಿ ಇರದೇ ಇದ್ದು ಈ ಮದುವೆ ನಡೆದು ಹೀಗಾ ಗಿದ್ದರೆ ನನಗೆ ಈ ದುಃಖ ಇರುತ್ತಿರಲಿಲ್ಲ. ಈಗ ನಾನು ಕಂಡೂ ಕಂಡು ಏನೂ ಮಾಡದ ಹಾಗಾಯಿತು. ಏನೂ ಮಾಡದೆ ಎಂದು ತಾನೇ ಹೇಗೆ ಹೇಳುವುದು? ನನ್ನ ಕೈಯಲ್ಲಾದದ್ದನ್ನು ಮಾಡಿ ದೆನು. ಸತ್ಯವಾನನು ಅಂದಿನಿಂದ ಒಂದು ವರುಷದ ಮೇಲೆ ಜೀವಿಸುವುದಿಲ್ಲವೆಂದು ತಂದೆಗೂ ಮಗಳಿಗೂ ಹೇಳಿದೆನು. ಈ ಮದು ವೆಯ ಮಾತನ್ನು ಬಿಡು ಎಂದು ಸಾವಿತ್ರಿಯನ್ನು ಬೇಡಿದೆನು. ಅವಳು ಒಪ್ಪಲಿಲ್ಲ.

(ಕಂದ)

ದಾಳಂಬೀಳುವುದೊರ್ಮೆಯೆ
ಪೇಳುವನಲೆ ಇತ್ತೆನೆನ್ನುತೊರ್ಮೆಯೆಸಂತಂ
ಪೇಳುವಳಲೆ ಸತಿ ತನ್ನನು
ಆಳುವನೀಪುರುಷನೆಂದದೋರ್ವನಮಾತ್ರಂ ॥

ಎಂದು ನಾನು ಎಂದೋ ಹೇಳಿದ್ದ ಮಾತನ್ನು ನನಗೆ ಬದಲಿಗೆ ಹೇಳಿ ದಳು. ಅವಳು ತಿಳಿಯದವಳಲ್ಲ. ದೇಶದೇಶವನ್ನು ಸುತ್ತಿ ತನಗೆ ಇಷ್ಟನಾದ ವರನನ್ನು ಹುಡುಕಿದಳು. ರಾಜ್ಯವನ್ನು ಕಳೆದುಕೊಂ ಡಿದ್ದ ಇವರ ಮನೆಯುವರನ್ನು ಈ ಆಶ್ರಮದಲ್ಲಿ ಕಂಡು ಜ್ವಾಲೆಯು ಅಗ್ನಿಯನ್ನು ವರಿಸಿದಂತೆ ಇವನನ್ನು ವರಿಸಿದಳು. ಅದರ ಮೇಲೆ ನಾನುತಾನೇ ಏನು ಹೇಳುವುದು. ಇವನಲ್ಲದೆ ಇನ್ನು ಯಾರನ್ನಾ ದರೂ ವರನೆಂದು ಹೇಳಬಹುದಾಗಿದ್ದರೆ ಅದೊಂದು ಮಾತು. ಇವನಿಗೆ ಸಮನಾದ ವರನನ್ನು ಯಾರನ್ನು ತರುವುದು?

(ಕಂದ)

ರಂತಿಯಯಾತಿಗಳೋಲ್ ಗುಣ
ವಂತಂ ತಾಂ ರೂಪದೋಳ್ ಜಯಂತನೊಲಿಸೆವಂ

ಸಂತರಸೇವೆಯೊಳಾಶಿಬಿ
ಯಂತಿರುವಂ ಸತ್ಯವಾಕ್ಯನೀತಂ ಧೀರಂ ॥

ಗುಣವಂತನೇ ಸರಿ. ಆದರೆ ಗುಣವನ್ನೆಲ್ಲಾ ನುಂಗುವ ಈ ಒಂದು ಕೊರತೆ. ಸಾವಿತ್ರಿಯು ಇವನನ್ನು ವರಿಸಿದ್ದು ಮಲ್ಲಿಗೆಯ ಬಳ್ಳಿಯು ಕ್ರಿಮಿಗ್ರಸ್ತಮೂಲವಾದ ಸಣ್ಣ ಸಾಲವೃಕ್ಷವನ್ನು ಅವಲಂಬಿಸಿದ ಹಾಗಾಯಿತು. ಇಂಥಾ ಹಠದ ಹುಡುಗಿ! ಕೊನೆಗೆ ನನ್ನನ್ನೇ ಒಪ್ಪಿಸಿದಳು; ಹೆತ್ತ ತಂದೆಯನ್ನೂ ಒಪ್ಪಿಸಿದಳು. ಮದುವೆಯೂ ಆಯಿತು. ವರುಷವೂ ಮುಗಿಯಿತು. ವರುಷವಾಯಿತೇ ಎಂದು ನನಗೇ ಸಂದೇಹವಾಗುತ್ತದೆ: ದಿನ ಅಷ್ಟು ಬೇಗ ಕಳೆಯಿತು. ದಿನಗಳನ್ನು ಎಣಿಸಿಕೊಂಡಿಪ್ಪ ಆ ಬಡಪಾಪಿಯು ಪಾತೇನು? ಅಯ್ಯೋ, ಮದ್ರಾಧಿಪತಿಯು ಸಾವಿತ್ರೀದೇವಿಯ ಉಪಾಸನೆಯನ್ನು ಮಾಡಿ ಆರುದಿವಸದ ಉಪವಾಸದ ಕೊನೆಯಲ್ಲಿ ಆಕೆಯನ್ನು ಪ್ರತ್ಯಕ್ಷವಾಗಿ ಕಂಡು ವರಪ್ರಸಾದವನ್ನು ಪಡೆದು ಮಕ್ಕಳಿಲ್ಲವಲ್ಲ ಎನ್ನುತ್ತಿದ್ದವನು ಒಬ್ಬ ಮಗಳನ್ನು ಪಡೆದದ್ದು ಇದಕ್ಕಾಗಿಆಯಿತೇ? ಇಗೋ ಇವರು ಇತ್ತ ಬರುತ್ತಿದಾರೆ. ಸತ್ಯವಾನನು ಉಲ್ಲಾಸವಾಗಿದಾನೆ. ಇವಳ ಮುಖದಲ್ಲಿ ಚಿಂತೆಯು ಪ್ರಪವಾಗಿ ಕಾಣುತ್ತಿದೆ. ಆಹಾ, ಧೀರಸತಿ! ಸಾವಿತ್ರಿ! ನಿನ್ನ ಧೈರ್ಯವೇ ಧೈರ್ಯ. ಒಬ್ಬರಿಗಾವರೂ ತನ್ನ ಭಯವನ್ನು ಹೀಗೆಂದು ತಿಳಿಸದೆ ತಾನು ಮಾತ್ರ ತನ್ನ ಮಾಂಗಲ್ಯವನ್ನು ರಕ್ಷಿಸಿಕೊಳ್ಳುವುದಕ್ಕೆ ವ್ರತಾದಿಗಳನ್ನು ಎಡೆಬಿಡದೆ ಮಾಡಿದ್ದಾಳೆ. ಇವಳಿಗೆ ದೇವರು ಒಳ್ಳೆಯದನ್ನು ಮಾಡಲಿ. ಇವಳ ಗುಣವನ್ನು ಎಣಿಸಿದ್ದೇ ಆದರೆ ಇವಳ ಪತಿಯನ್ನು ಉಳಿಸಿಕೊಟ್ಟರೂ ಹೆಚ್ಚಲ್ಲ. ಒಂದು ವರುಷದ ದಿನ ಈ ಭಯವು ಮನಸ್ಸಿನಲ್ಲಿ ಕೊರೆಯುತ್ತಾ ಇದ್ದರೂ ಮಾವನಿಗೆ ಶುಶ್ರೂಷೆಯಿಂದಲೂ, ಅತ್ತೆಗೆ ವಿಧೇಯತೆಯಿಂದಲೂ, ಪತಿಗೆ ಪ್ರಿಯವಾದ ನಡೆನುಡಿಗಳಿಂದಲೂ ಸಂತೋಷವನ್ನು ಕೊಡುತ್ತಾ, ನೆರೆಯ ಆಶ್ರಮವಾಸಿಗಳೊಂದಿಗೆ ವಿಶ್ವಾಸದಿಂದ ನಡೆದುಕೊಳ್ಳುತ್ತಾ ಸತಿ

ಯರಿಗೆ ಮೇಲ್ಪಙ್ಕ್ತಿ ಎಂಬಂತೆ ಇದ್ದಳು. ವೀರ ರಮಣಿ! ಆದರೆ ನಾನು ಹತ್ತು ದಿನದ ಹಿಂದೆ ಬಂದಾಗ ಇದ್ದದ್ದಕ್ಕೂ ಈಗ್ಯೂ ಬಹಳ ತೆಗೆದು ಹೋಗಿದ್ದಾಳೆ; ಮುಖವು ಕುಂದಿದೆ. ಸತ್ಯವಾನನು ಏನನ್ನೋ ಹೇಳುತ್ತಿದ್ದಾನೆ. ಅವಳಿಗೆ ಆದರಮೇಲೆ ಮನಸ್ಸಿಲ್ಲ.

(ವೃತ್ತ)

ಮ. ಬರೆಕಾಲಂ ಮುಗಿಲೊಡ್ಡಭಾರದಿ ದಿನಂ ಮಂಕಾಗಿರಲ್ ಭಾಸ್ಕರಂ
ಹರಿಸಂ ನೀಡುವರೋರ್ಮೆಹಾಸಿಸೆ ದಿನಂನಕ್ಕಂತೆತೋರಲ್ಕದಂ
ಮರೆಯಿಕ್ಕಂಮುಗಿಲೀಕೆಯುಂ ನಿಮಿಷಮಾತ್ರಂ ತಾಳಲಾತ್ಮೇಶನಾ
ಸರಸಾಲಾಪದಿ ಹಾಸಮಂ ಮರೆಯಿಕುಂಭೀತ್ಯುತ್ಕರಂ ಮತ್ತದಂ ॥

ಮಗು, ನೀನು ಎಂಥಾ ಕಷ್ಟವನ್ನು ಮದುವೆ ಮಾಡಿಕೊಂಡೆ! ಮದುವೆಯಾದಂದಿನಿಂದ ಬರಿಯ ವ್ರತವೇ ಆಯಿತು. ಎಷ್ಟು ಕೃಶಳಾಗಿಹೋಗಿದ್ದಾಳೆ!

(ಕಂದ)

ವ್ಯಸನವ್ರತಗಳಕತದಿಂ
ಪಸಿಯೊಡಲತಿಸೂಕ್ಷ್ಮವಾಗೆ ವಿಸ್ಫಾರಿತಮಾ
ಗೆಸೆವಕ್ಷಿಯು ಪೊಸಬೆಳಗಿನ
ಜಸದಿಂ ಸತಿ ಬರಿಯಜೀವಮುಸಿತೋರುತಿಹಳ್ ॥

ತನ್ನ ಜೀವವನ್ನೇ ಆ ಪತಿಯಲ್ಲಿ ತುಂಬುವಳೋ ಎಂಬಂತೆ ಅವನನ್ನು ನೋಡುತ್ತಿರುವಳು. ಆಯಿತು. ಇಂದು ಇಲ್ಲಿ ಹತ್ತಿರ ಪಲ್ಲಿಯೇ ಇರುತ್ತಾ ಅವಳಿಗೆ ಧೈರ್ಯವನ್ನು ಹೇಳಿ ಈ ಕಷ್ಟದ ಸಮಯದಲ್ಲಿ ನೆರವಾಗಿರಬೇಕು. ಮದ್ರದೇಶಾಧಿಪತಿಯು ನನ್ನ ಮಿತ್ರನಾದದ್ದಕ್ಕೂ ನಾನು ಚಿಕ್ಕಂದಿನಿಂದ ಈ ಕುಮಾರಿಯನ್ನು ನೋಡಿ ಆಡಿಸಿದುದಕ್ಕೂ ಇನ್ನೇನೂ ಇಲ್ಲದಿದ್ದರೂ ಇಷ್ಟನ್ನಾದರೂ ಮಾಡಬೇಕು ಪರಮಾತ್ಮನ ಇಚ್ಛೆಯು ಹೇಗೋ ಹಾಗೆ ಆಗಲಿ. ಈಗ ಒಂದುಕಡೆ ಇರುವೆನು. ಮತ್ತೆ ಬಂದು ಇವಳಿಗೆ ಧೈರ್ಯ ಹೇಳುವೆನು. (ಎಂದು ಒಂದು ಕಡೆಗೆ ಹೋಗುವನು.)

(ಪ್ರವೇಶ : ಸತ್ಯವಾನ ಸಾವಿತ್ರಿ.)

ಸತ್ಯವಾನ.—ದೇವೀ, ಈ ವನವು ಎಷ್ಟು ಚೆನ್ನಾಗಿದೆ ನೋಡಿದೆಯಾ?

ಸಾವಿತ್ರಿ.—ಹೌದು.

ಸತ್ಯವಾನ.—ಇಷ್ಟು ದಿನವಾಯಿತು. ನನಗೆ ವನವು ವಸಂತಋತುವಿನಲ್ಲಿ ಚೆನ್ನಾಗಿರುತ್ತದೆಯೋ ಗ್ರೀಷ್ಮಋತುವಿನಲ್ಲಿ ಚೆನ್ನಾಗಿರುತ್ತದೆಯೋ ಹೇಳುವುದಕ್ಕಾಗಿಲ್ಲ. ಬರುವ ವಸಂತಋತುವಿನಲ್ಲಿ ಈ ವಿಷಯವನ್ನು ನಿರ್ಧರಿಸಬೇಕೆಂದಿದ್ದೇನೆ.

ಸಾವಿತ್ರಿ.—(ತಾನೇ) ದೇವದೇವ! (ಸತ್ಯವಾನನಿಗೆ) ಆಗಬಹುದು.

ಸತ್ಯವಾನ.—ಮುಂದಿನ ವಸಂತಋತುವಿನವೇಳೆಗೆ ನಿನ್ನ ಈ ವ್ರತಗಳು ಮುಗಿದಿದ್ದರೆ ಅದು ಎಲ್ಲಾ ಋತುಗಳಿಗಿಂತಲೂ ಚೆನ್ನಾಗಿ ತೋರುವುದೇ ನಿಜ.

ಸಾವಿತ್ರಿ.—ವ್ರತಗಳು ಇಂದಿಗೆ ಮುಗಿಯುವುವು.

ಸತ್ಯವಾನ.—ಏನೋ ಅದು ನನಗೆ ಸಂದೇಹವೇ. ನೀನು ಬರುವುದಕ್ಕೆ ಮೊದಲು ನಮ್ಮ ತಾಯಿಯವರು ಈ ಆಶ್ರಮದ ಜನರ ಜೊತೆಯಲ್ಲಿ ಸುಮ್ಮನೆ ವ್ರತಗಳನ್ನೇ ಮಾಡುತ್ತಿದ್ದರು. ಈ ಹೊತ್ತು ಏನು ಎಂದರೆ, ತಂದೆಗೆ ಕಣ್ಣು ಬರಲಿ ಎಂತ; ನಾಳೆ ಏನು ಎಂದರೆ, ನಾನು ದೊಡ್ಡವನಾಗಲಿ ಎಂತ; ನಾಡಿದ್ದು ನಮಗೆ ರಾಜ್ಯಬರಲಿ ಎಂತ; ಅಂತೂ ದಿನವೂ ಒಂದೊಂದು ವ್ರತವಾಗಿತ್ತು. ವಯಸ್ಸಾದವರೆಲ್ಲ ಹೀಗೆಯೇ ಎಂದುಕೊಂಡು ಸುಮ್ಮನಿದ್ದೆ. ನೀನು ಬಂದೆ. ನೀನೂ ಯಾವ ವೃದ್ಧಸುಮಂಗಲಿಯನ್ನಾದರೂ ಮೀರಿಸುವಂತೆ ವ್ರತಗಳನ್ನು ಆರಂಭಿಸಿಬಿಟ್ಟೆ. ಬಂದಂದಿನಿಂದ ಬರಿಯವ್ರತ. ನಿನ್ನ ಜತೆಗೆ ನನಗೂ ವ್ರತ.

ಸಾವಿತ್ರಿ.—ವ್ರತಗಳು ಸಫಲವಾಗಲಿ. ನಾಳೆಯಿಂದ ನಾನು ಎಲ್ಲರಂತೆ ಪತ್ನಿ.

ಸತ್ಯವಾನ.—ಆ ಫಲಯಾವುದು? ಅದೊಂದನ್ನು ನೀನು ಯಾರಿಗೂ ಹೇಳಲೊಲ್ಲೆಯಲ್ಲ.

ಸಾವಿತ್ರಿ.—ಅದು ಯಾರಿಗೂ ಹೇಳುವ ಮಾತಲ್ಲ.

ಸತ್ಯವಾನ—ಒಳ್ಳೆಯದಾಯಿತು. ನೀನು ತಿಳಿಯದವಳಲ್ಲ. ವ್ರತಮಾಡಬೇಕೆಂದರೆ ಮಾಡು. ಸಂತೋಷ. ಇಂದು ನೀನು ವನಕ್ಕೆಬರುತ್ತೇನೆ ಎಂದಾಗ ನನಗೆ ಬಹಳ ಸಂತೋಷವಾಯಿತು. ವನವು ಬಹಳ ಚೆನ್ನಾಗಿದ್ದಾಗ ನಿನ್ನನ್ನೂ ಕರೆದೆ; ನೀನು ಬರಲಿಲ್ಲ. ಈಗ ನೀನೇ ಬರುತ್ತೇನೆ ಎಂದೆಯಲ್ಲ. ಸ್ವಲ್ಪವಾದರೂ ವಿನೋದವಾಗಿರಬಹುದು. ಎಂದುಕೊಂಡೆನು..........

ಸಾವಿತ್ರಿ.—ನಾನು ನಿಮ್ಮ ಜೊತೆಯಲ್ಲಿರೋಣವೆಂದೇ ಬಂದೆನು.

ಸತ್ಯವಾನ.—ಆದರೇನು? ನೀನು ತ್ರಿರಾತ್ರವ್ರತವನ್ನುಮಾಡಿ ಪಾರಣೆ ಮಾಡದೆ ಬಂದಿದ್ದೀಯೆ, ವನಕ್ಕೆ ನಾಳೆ ಬರಬಹುದಾಗಿತ್ತು.

ಸಾವಿತ್ರಿ.—ಇಲ್ಲ. ಇಂದು ತಮ್ಮ ಜೊತೆಯಲ್ಲೇ ಇರುವುದು ಈ ವ್ರತದಲ್ಲಿ ಸೇರಿದ್ದು.

ಸತ್ಯವಾನ.—ಅಂತೂ ನೀನು ಯಾವುದನ್ನಾದರೂ ಸರಿಯಾದದ್ದೆಂದು ಮಾಡಬೇಕೆಂದರೆ ಅದನ್ನು ಬೇಡ ಎಂದು ಬಿಡಿಸುವುದಕ್ಕೆ ಸಾಧ್ಯವಲ್ಲ.

ಸಾವಿತ್ರಿ.—ನಾನು ಹಠವಾದಿ. ಅದನ್ನು ಕ್ಷಮಿಸಬೇಕು.

ಸತ್ಯವಾನ.—ನಿನ್ನದು ತಪ್ಪು ಎಂದು ಹೇಳಲಿಲ್ಲ, ಬಿಡು; ಇತ್ತನೋಡು. ಈ ನವಿಲುಗಳು ಆಡುತ್ತಿರುವುದು ಬಹಳ ಚೆನ್ನಾಗಿದೆ ಅಲ್ಲವೆ?

ಸಾವಿತ್ರಿ.—ಹೌದು.

ಸತ್ಯವಾನ.— (ಕಂದ)

ಬರ್ಹದ ವಿಪುಳತೆಯಿಂತಾ
ಸರ್ಪಂಗಡ ತನ್ನವರಿಪುದೆಂದು ಮಯೂರನು
ನಿರ್ಹಡಿದು ಕೆದರಿ ನಿಂದಿರೆ
ಬರ್ಹಿಯುಸತಿ ನೋಡುತಿರ್ಪುದದ ಗಂಭೀರಂ ॥

ಸಾವಿತ್ರಿ.—ಹೌದು.

ಸತ್ಯವಾನ.—ದೇವೀ.

ಸಾವಿತ್ರಿ.—ನಾಥ.

ಸತ್ಯವಾನ.—ನಾನು ಹಾಸ್ಯಮಾಡಿದರೆ ನೀನು ಸ್ವಲ್ಪ ನಗಬಾರದೆ?

ಸಾವಿತ್ರಿ.—ನನಗೆ ಏನೋ ಯೋಚನೆ.

ಸತ್ಯವಾನ.—ನಾನು ಇಲ್ಲಿರುವಾಗ ನಿನಗೆ ಏನು ಯೋಚನೆ? ಅದು ಏನು ಇದ್ದರೂ ನನ್ನೊಂದಿಗೆ ಹೇಳು. ಇಲ್ಲಿಬಾ. (ಕೈನೀಡಿ ಕರೆಯುವನು.)

ಸಾವಿತ್ರಿ.—(ಹತ್ತಿರಹೋಗಿ) ನನ್ನ ಮನಸ್ಸು ಸುಖವಾಗಿಲ್ಲ.

ಸತ್ಯವಾನ.—ಆಹಾ, ನೀನು ಈ ವ್ರತಗಳ ಕಷ್ಟವನ್ನು ತಡೆಯಲಾರೆ. ಅರಮನೆಯಲ್ಲಿ ಹುಟ್ಟಿ ಬೆಳೆದ ಹುಡುಗಿಯನ್ನು ನಾವು ತೆಗೆದುಕೊಂಡದ್ದು ಮೊದಲು ಎತ್ತಿಕೊಳ್ಳುತ್ತಾ ತಪ್ಪು. ಅರಮನೆ, ಒಳ್ಳೆಯ ಆಹಾರ, ಸೇವಕರು ಅದು ಎಲ್ಲಿ. ಈ ಪರ್ಣಶಾಲೆ, ಈ ಪಣ್ಣು ಹಂಪಲು, ಈ ದಿನ ಬೆಳಗಾದರೆ ಮನೆ ಕೆಲಸ, ಇದು ಎಲ್ಲಿ. ಸಾಲದ್ದಕ್ಕೆ ವ್ರತಗಳು. ನಾನು ಅಮ್ಮನಿಗೆ ಹೇಳಿದೆ, ಈ ವ್ರತಗಳು ವಿಪರೀತವಾದವು, ಸೊಸೆ ಬಂದ ಮೊದಲನೇ ವರ್ಷವೇ ಅವಳನ್ನು ಸಣ್ಣಗೆ ಮಾಡುತ್ತೀಯಾ ಎಂದೆ. ದೇಹವು ಭದ್ರವಾಗಿದ್ದರೆ ಮನಸ್ಸು ನೆಮ್ಮದಿಯಾಗಿರುವುದು. ದೇಹವು ಬಳಲಿದರೆ ಮನಸ್ಸು ಬಳಲುವುದು. ಇದಕ್ಕೆ ಇನ್ನೇನೂ ಕಾರಣವಿಲ್ಲ. ಈ ವ್ರತಗಳು ಸಾಕು.

ಸಾವಿತ್ರಿ.—ವ್ರತಗಳು ಇಂದಿಗೆ ಮುಗಿಯುವುವು.

ಸತ್ಯವಾನ.—ನೀನು ವ್ರತಮಾಡುವುದು ತಂದೆಯವರಿಗೆ ಸ್ವಲ್ಪವಾದರೂ ಇಷ್ಟವಿಲ್ಲ. ಈ ತ್ರಿರಾತ್ರಿಕ ವ್ರತವನ್ನು ಮಾಡುತ್ತೇನೆಂದು ನೀನು ಹೇಳಿದಾಗ ಅವರು ಹೇಳಿದ ಮಾತನ್ನು ಕೇಳಿದೆಯೋ ಇಲ್ಲವೋ?

ಸಾವಿತ್ರಿ.—ಯಾವ ಮಾತು?

ಸತ್ಯವಾನ.—ಅಮ್ಮಾ ಮನೆಗೆ ಬಂದ ಸೊಸೆಯರು ಒಡವೆಬೇಕು ವಸ್ತ್ರ ಬೇಕು ಎಂದು ಅಪೇಕ್ಷಿಸುವುದುಂಟು. ನೀನು ವ್ರತಗಳನ್ನೂ ಉಪ ವಾಸಗಳನ್ನೂ ಬೇಕೆನ್ನುವೆ. ಮನೆಯಲ್ಲಿ ಯಾವುದು ತುಂಬಾ ಇದೆ ಎಂತ ನೋಡಿ ಅವನ್ನು ಬೇಡುತ್ತಿರುವೆಯೆಂದು ತೋರುತ್ತದೆ, ಎಂದರು.

ಸಾವಿತ್ರಿ.—ಅವರು ಆಮೇಲೆ ಸಂತೋಷವಾಗಿ ಅಪ್ಪಣೆಕೊಟ್ಟಮೇಲೆಯೇ ನಾನು ವ್ರತವನ್ನು ಕೈಕೊಂಡೆನು.

ಸತ್ಯವಾನ.—ತಮಗೆ ಇಷ್ಟವಿಲ್ಲದಿದ್ದರೆ ಮಾಡುವುದಿಲ್ಲ ಎಂದು ನೀನು ಹೇಳಿದೆ. ಅದಕ್ಕೆ ಅವರು–ನೀನು ಯಾವುದನ್ನೂ ಕೊಡೆಂದು ಬೇಡಿಲ್ಲ, ಬೇಡಿದ್ದಕ್ಕೆ ನಾನು ಅಡ್ಡಿಬರುವುದಿಲ್ಲ, ವ್ರತವು ಆಚರಣೀ ಯವೇಸರಿ, ಎಂದರು. ಅದು ಹಾಗಿರಲಿ. ನೀನು ಬಹಳ ಯೋಚಿ ಸುತ್ತಿರುವ ವಿಷಯ ಏನೆಂದು ಹೇಳಬಾರದೆ?

ಸಾವಿತ್ರಿ.—ಎಂಟುದಿನದ ಹಿಂದೆ ಪ್ರಧಾನಿಗಳು ಬಂದು ಹೇಳಿದ ವಿಷಯ ವನ್ನು ಕುರಿತು ಯೋಚಿಸುತ್ತಿದ್ದೆ. (ತನಗೆ ತಾನೇ) ಈ ಮರೆ ಮಾಚುವ ಪಾಪವನ್ನು ದೇವರು ಮನ್ನಿಸಲಿ.

ಸತ್ಯವಾನ.—ಯೋಚಿಸಬೇಕಾದದ್ದಿಲ್ಲವಲ್ಲ. ತಂದೆಯವರು ಈ ಆಶ್ರಮವಾಸ ದಲ್ಲಿಯೇ ಸುಖವಾಗಿರುವರು. ತಾಯಿಯವರು ಅವರ ಸೇವೆಯಲ್ಲಿ ಸುಖವಾಗಿರುವರು. ನನಗೆ ನಿಜವಾಗಿಯೂ ರಾಜ್ಯವನ್ನು ಪಡೆದು ಆಳಬೇಕೆಂದು ಆಸೆ ಇಲ್ಲ. ನೀನು ನಮಗೆಲ್ಲರಿಗಿಂತ ತಿಳಿದವಳು. ನಿನಗೂ ರಾಜ್ಯಬೇಕಿಲ್ಲ. ಇನ್ನು ಯೋಚನೆ ಏಕೆ?

ಸಾವಿತ್ರಿ.—ಪ್ರಜೆಗಳು ತಮ್ಮ ರಾಜನನ್ನು ಅಪೇಕ್ಷಿಸುವರೆಂದು ಪ್ರಧಾ ನಿಗಳು ಹೇಳಿದರು. ಪ್ರಜೆಗಳಿಗಾಗಿ ರಾಜ್ಯವನ್ನು ಅಪೇಕ್ಷಿಸಬೇಕೋ ಇಲ್ಲವೊ?

ಸತ್ಯವಾನ.—ಅದಕ್ಕೆ ನಾನು ಹೇಳಿದೆನಲ್ಲ. ಗಾದಿಯಮೇಲಿದ್ದ ರಾಜನನ್ನು ಶತ್ರುಬಂದು ಓಡಿಸಿದಾಗ ಪ್ರಜೆಗಳು ಸಾಕಾದಷ್ಟು ಯತ್ನಮಾಡದೆ

ಸುಮ್ಮನಿದ್ದುಬಿಟ್ಟರು. ರಾಜನು ಕಾನನವಾಸಿಯಾದನು. ಈಗ ಹೊಸರಾಜನು ಬೇಡ ಮೊದಲರಾಜನೇ ಬೇಕೆಂದರೆ ಪ್ರಜೆಗಳು ಹೊಸರಾಜನನ್ನು ಮೊದಲು ಓಡಿಸಲಿ. ಓಡಿಸಿದಮೇಲೆ ನಮ್ಮನ್ನು ಬಂದುಕೇಳಲಿ. ಆಮೇಲೆ ನಾವು ಹೋಗುವುದೇ ಬಿಡುವುದೇ ಎಂದು ಯೋಚನೆಮಾಡುವ. ಆವರೆಗೆ ನಾವು ನಮ್ಮ ಆಶ್ರಮದಲ್ಲಿ ಸುಖವಾಗಿರಬಹುದು.

ಸಾವಿತ್ರಿ.—ಪ್ರಜೆಗಳು ತಮ್ಮ ರಾಜನನ್ನು ಬೇಡಿ ಮೊರೆಯಿಡುತ್ತಿದ್ದರೆ ಆಶ್ರಮವಾಸದಲ್ಲಿ ಸುಖವನ್ನು ಪಡೆಯುವುದು ರಾಜನ ಧರ್ಮವಲ್ಲವಷ್ಟೆ.

ಸತ್ಯವಾನ.—ಅದು ರಾಜನಾಗಿರುವವನಿಗೆ ಧರ್ಮವಲ್ಲ. ಆದರೇನು? ನಾವು ರಾಜರಲ್ಲ. ಸಿಂಹಾಸನವನ್ನು ಬಿಡುವುಮಾಡಿ ಪ್ರಜೆಗಳು ಬಂದು ಬೇಡಿದಾಗ್ಯೂ ನಾವು ರಾಜವಂಶದಲ್ಲಿ ಹುಟ್ಟಿದುದಕ್ಕಾಗಿ ಆ ಕೆಲಸವನ್ನು ಸ್ವೀಕರಿಸಬೇಕಾಗುವುದು. ಆಮೇಲೆ ಅದಕ್ಕೆ ಸರಿಯಾಗಿ ನಡೆಯಬೇಕಾಗುವುದು. ಆವರೆಗೆ ನಾವು ಎಲ್ಲಿ ಇದೇವೋ ಅಲ್ಲಿ ಸರಿಯಾಗಿ ನಡೆಮುಕೊಂಡರೆ ಸಾಕು.

ಸಾವಿತ್ರಿ.—ತಿಳಿದವರಿಗೆ ನಾನು ಏನು ಹೇಳಬೇಕು?

ಸತ್ಯವಾನ.—ಕಣ್ಣಿಲ್ಲದ ದೊರೆಯನ್ನು ಕಟ್ಟಿಕೊಂಡು ಏನುಮಾಡುವುದು ಎಂದು ಆಗ ಹೇಳಿದವರು ಈಗಲೂ ರಾಜ್ಯದಲ್ಲಿದಾರೆ. ಈಗಲೂ ಅದೇಮಾತನ್ನು ಹೇಳಿಯಾರು. ಕಣ್ಣಿಲ್ಲದ ದೊರೆಯು ಕಾನನದಲ್ಲೇ ಸುಖವಾಗಿದ್ದಾನೆ.

(ವೃತ್ತ)

ಶೃಂಗಾರಾಕೃತಿಯಾಂತು ಪೂತಳಿರಪೇರ್ಚಿಂ ಸೌಖ್ಯವಂನೀಡುತಂ
ಭೃಂಗಂ ಕೂಜಿಪಗಾನದಿಂ ಪ್ರಣವದೊಂದಾನಂದವಂಬೀರುತಂ
ಅಂಗೋಪಾಂಗವ ಶಾಂತಿಯಿಂತಣಿಸುವೀ ಕಾಂತಾರಸಾಮ್ರಾಜ್ಯದೊಳ್
ಅಂಗಂವಂಗಕಳಿಂಗಮೆಂಬನಿತುರಾಜ್ಯಂ ಸಾಟಿತಾನಕ್ಕುಮೇ ॥

ದೊರೆಯಾಗಿದ್ದವರು ಕಾಡಿನಲ್ಲಿರಬೇಕಾಯಿತಲ್ಲ ಎಂದು ಅವರ ಸಲುವಾಗಿ ಒಂದೊಂದುಸಲ ಎಂದುಕೊಳ್ಳುತ್ತೇನೆ. ಆಮೇಲೆ ಹೇಗಿದ್ದರೂ ವಾನಪ್ರಸ್ಥಾಶ್ರಮಕ್ಕೆ ಬರಬೇಕಾಗಿತ್ತು ಅದೇ ಇದಾಯಿತು ಎಂದು ತೋರಿ ಮನಸ್ಸು ಶಾಂತವಾಗುತ್ತದೆ.

ಸಾವಿತ್ರಿ.—ಅವರಿಗೆ ವಾನಪ್ರಸ್ಥವಾಯಿತು. ತಮಗೆ?

ಸತ್ಯವಾನ.—ನನಗೇನು?

(ಕಂದ)

ದೊರೆತನಮಿರೆ ನೃಪಸುತರಿಗೆ
ದೊರೆಯದು ಮಾತಾಪಿತರನು ಸೇವಿಸಲೆನ್ನೀ
ಪರಿಯುವಕಾಶಂನೋಡಲ್
ದೊರೆತಿರ್ಕುಮಿದೆನಗತೀವಭಾಗ್ಯೋದಯದಿಂ ॥

ನನಗಾಗಿ ಸ್ವಲ್ಪವೂ ಯೋಚಿಸಬೇಡ. ನಿನ್ನ ವಿಷಯ ಹೇಳಬೇಕಾದದ್ದೇ ಇಲ್ಲ. ನೀನೇ ಹುಡುಕಿಕೊಂಡು ಬಂದು ನನ್ನನ್ನು ಒಪ್ಪಿದೆ. ರಾಜ್ಯವನ್ನು ಅಪೇಕ್ಷಿಸುವಳಾಗಿದ್ದರೆ ಹಾಗೆ ಮಾಡುತ್ತಿರಲಿಲ್ಲ. ಈ ಚಿಂತೆಯನ್ನು ಬಿಡು.

ಸಾವಿತ್ರಿ.—ಬಿಡುವೆನು.

ಸತ್ಯವಾನ.—ನೀನು ಆಯಾಸಪಟ್ಟಿದ್ದೀಯೆ. ನೀನು ಇಲ್ಲಿ ಕುಳಿತುಕೊ. ನಾನು ವನದೊಳಗೆ ಹೋಗಿ ಫಲಪುಷ್ಪಗಳನ್ನು ತೆಗೆದುಕೊಂಡು ಹಿಂದಕ್ಕೆ ಬರುವೆನು.

ಸಾವಿತ್ರಿ.—ನಾನು ನಿಮ್ಮ ಜೊತೆಯಲ್ಲೇ ಇರುತ್ತೇನೆ.

ಸತ್ಯವಾನ.—ಏಕೆ? ನಿನಗೇನು ಭಯ?

ಸಾವಿತ್ರಿ.—ನಿಮ್ಮನ್ನು ಒಬ್ಬರನ್ನೇ ಬಿಡಲಾರೆ.

ಸತ್ಯವಾನ.—ನನಗೇನು ಭಯ. ನೀವಿಬ್ಬರೂ ಹೀಗೆಯೇ. ದಿನವೂ ವನಕ್ಕೆ ಬರುವಾಗ ತಾಯಿಯು ಭದ್ರವಪ್ಪ ಎನ್ನುವರು. ನೀನೂ ಹಾಗೆಯೆ.

ಸಾವಿತ್ರಿ.—ನನಗೆ ಇಂದು ಏನೋ ಮನಸ್ಸಿನಲ್ಲಿ ಬಹಳ ಭಯವಾಗುತ್ತದೆ.

ಸತ್ಯವಾನ.—ಭಯವೇನು ನನ್ನ ಗಿಳಿಯೆ? ನಮ್ಮನ್ನೆಲ್ಲ ರಕ್ಷಿಸಲು ದೇವರು ಇರುವನು.

(ಕಂದ)

ಶ್ರೀನಾಥಂ ಕರುಣಾನಿಧಿ
ಆನಂದದೊಳೆಲ್ಲ ಜಗವ ಪೊರೆಯುತಲಿಹನೇ
ತಾನೆಮ್ಮಂ ಪಾಲಿಸುವಂ
ಮ್ಲಾನತೆ ಭಯಗಳನು ಬಿಡುವುದೆನ್ನಯರಮಣೀ॥

(ತೆರೆಯಲ್ಲಿ ನಾರದನು ಹಾಡುತ್ತಾ ಬರುವ ಧ್ವನಿಯು ಕೇಳುವುದು.)
ನಾರದ ಮಹರ್ಷಿಗಳು ಬರುತ್ತಿದಾರೆ.

ಸಾವಿತ್ರಿ.—ಹೌದು.

ನಾರದ.—(ಹಾಡುತ್ತಾ ಬರುವನು.)

(ರಾಗ ದೇವಗಾಂಧಾರಿ.)

ಏತರ ಭಯವಿದು ಎಂಬನು ಶ್ರೀಹರಿ
ಕಾತರರಾಗುವುದೇತಕೆ ಎಂಬನು॥

ಕರಿಬಲಿಧ್ರುವರನು ಪೊರೆದುದ ಕಾಣಿರ
ಅರಿಯಿರ ಪ್ರಹ್ಲಾದನ ನಾಪೊರೆದುದ
ಮರೆವೆನೆ ಭಕ್ತರ ಪೊರೆಯುವ ಕಾರ್ಯವ
ಅರಿದಿರಲಿದನಿನ್ನೇತಕೆ ಭಯವಿದು॥

ಲೋಕಗಳೆಲ್ಲವ ರಕ್ಷಿಪುದೆಂಬ
ಏಕಕಾರ್ಯದಲಿ ನಿಂದಿರೆನಾನು
ನೂಕುತೆ ದೂರಕೆ ಭಯಗಳನೆಲ್ಲವ
ಹಾಕದೆ ಭಾರವನೆಲ್ಲವನೆನ್ನೊಳು॥

ದಯೆಯಿಂತೀವಿದ ಕುವಲಯದಂದದ
ನಯನಗಳಿಂದವಲೋಕಿಸುತೆಮ್ಮನು
ಭಯವಬಿಡಿರಿ ಧೈರ್ಯದೊಳಿರಿ ಎಂದು ಅ-
ಭಯವನು ಅಮೃತದ ಹಸ್ತದಿ ನೀಡುತೆ॥

ಏತರಭಯವಿದು ಎಂಬನು ಶ್ರೀಹರಿ
ಕಾತರರಾಗುವುದೇತಕೆ ಎಂಬನು॥

ಸತ್ಯವಾನ.—ಪೂಜ್ಯರಿಗೆ ವಂದಿಸುವೆನು.

ನಾರದ.—(ಸಾವಿತ್ರಿಯ ಕಡೆ ನೋಡುತ್ತಾ) ದೀರ್ಘಾಯುಷ್ಮಂತನಾಗಿ ಬಾಳು.

ಸಾವಿತ್ರಿ.—ನಾನು ವಂದಿಸುತ್ತೇನೆ.

ನಾರದ.—ದೀರ್ಘಸುಮಂಗಲಿಯಾಗಿ ಬಾಳು.

ಸತ್ಯವಾನ.—ತಾವು ಈಗ ಗಾನಮಾಡಿದ ವಿಷಯವನ್ನು ತಮ್ಮ ಮಗಳಿಗೆ ತಿಳಿಯಹೇಳಿದರೆ ಇದ್ದೀತು. ಏನೋ ಬಹಳ ಭಯವಾಗುತ್ತಿದೆಯಂತೆ.

ನಾರದ.—ಏನು ಭಯ ?

ಸತ್ಯವಾನ.—ಅದನ್ನು ನನಗೆ ಹೇಳುವುದಿಲ್ಲ. ತಾವು ಅವರ ಮನೆಯವರಂತೆಯೇ, ತಮಗೆ ಹೇಳಿದರೂ ಹೇಳಬಹುದು. ಕೇಳಿನೋಡೋಣವಾಗಲಿ. ಅಷ್ಟರಲ್ಲಿ ನಾನು ಫಲಪುಷ್ಪಗಳನ್ನು ತರುತ್ತೇನೆ.

ನಾರದ.—ಆಗಬಹುದು.

ಸಾವಿತ್ರಿ.—ನಾವೂ ಅವರ ಜತೆಗೆ ಹೋಗೋಣ.

ನಾರದ.—ಭಯಬೇಡ ತಾಯಿ, ಬಾ ಕುಳಿತುಕೋ. ಆತನು ಬೇಗಬರುವನು. ನೀನು ಬಹುದೂರ ನಡೆದುಬಂದಿರುವೆ, ಸ್ವಲ್ಪ ವಿಶ್ರಮಿಸಿಕೊ.

ಸಾವಿತ್ರಿ.—ಅಪ್ಪಣೆ (ಎಂದು ಸತ್ಯವಾನನಿಗೆ) ಹತ್ತಿರದಲ್ಲೇ ಇರಬೇಕು. ದೂರ ಹೋಗಬಾರದು.

ಸತ್ಯವಾನ.—ಹುಲಿಕರಡಿ ಬಂದರೆ ಮಾತನಾಡುವ ಧ್ವನಿಯಲ್ಲಿ ಕರೆ. ಬಂದು ಬಿಡುತ್ತೇನೆ. ದೂರಹೋಗುವುದಿಲ್ಲ. (ಎಂದು ಹೋಗುವನು.)

ನಾರದ.—ತಾಯಿ, ಸಾವಿತ್ರಿ, ಬಹಳ ಹೆದರಿ ಇರುವೆಯಾ?

ಸಾವಿತ್ರಿ.—ನನ್ನಜೀವ ತಲ್ಲಣಿಸುತ್ತಿದೆ.

ನಾರದ.—ತಲ್ಲಣಿಸತಕ್ಕದ್ದೇ. ಆದರೆ ಭಯದಿಂದ ಕುಂದಬಾರದು. ದೇವನ ಇಚ್ಛೆಯಂತೆ ನಡೆಯುವುದು. ನಾವು ಏನುಮಾಡಲಾದೀತು?

ಸಾವಿತ್ರಿ.—ನನಗೆ ಹಾಗೆ ಎನ್ನಿಸುವುದಿಲ್ಲ.

ನಾರದ.—ಮತ್ತೇನು?

ಸಾವಿತ್ರಿ.—ಏನಾದರೂ ಮಾಡಿಬಿಡುವುದು. ಅವರ ಪ್ರಾಣಕ್ಕೆ ಬದಲಾಗಿ ನನ್ನ ಪ್ರಾಣವನ್ನು ಕೊಟ್ಟು ಅವರನ್ನು ಉಳಿಸಬೇಕೆಂದು ತೋರುತ್ತದೆ. ಏನಾದರೂ ಹೇಗಾದರೂ ಮಾಡಿ ಇಷ್ಟನ್ನು ನಡೆಸಿದರೆ! ನಾನು ತಮ್ಮ ಕಾಲಿಗೆ ಬೀಳುತ್ತೇನೆ; ಇದನ್ನು ಹೇಗಾದರೂ ಅನುಗ್ರಹಿಸಬೇಕು.

ನಾರದ.—ಹೇಳಿದ್ದೀಯಲ್ಲ. ತ್ರಿರಾತ್ರವನ್ನು ಮಾಡಿದೆಯಾ?

ಸಾವಿತ್ರಿ.—ಹೌದು.

ನಾರದ.—ನೀನು ಅಂದು ಕೇಳಿದಾಗಲೇ ನಾನು ತಿಳಿದುಕೊಂಡೆ. ಸರಿ ಆ ಸಮಯದಲ್ಲಿ ಹೆದರದೆ ದೇವನನ್ನು ಕಣ್ಣಿಗೆ ಕಾಣಬೇಕೆಂದು ಬೇಡು. ನಿನ್ನ ಅದೃಷ್ಟದಲ್ಲಿದ್ದರೆ ಕಣ್ಣಿಗೆ ಕಾಣುವನು. ಭಯಪಡದೆ ಎಲ್ಲವನ್ನೂ ಹೇಳಿಕೊ. ಕೃಪೆಯಿಂದ ನೋಡಿದರೆ ನಾನು ಹೇಳಲಾರೆ. ಆದರೆ ನನಗೆ ಇದು ಆಗುವಮಾತಿನ ಹಾಗೆ ತೋರಲಿಲ್ಲ.

ಸಾವಿತ್ರಿ.—ತಾವು ನನಗೆ ಮನಃಪೂರ್ವಕವಾಗಿ ಆಶೀರ್ವಾದ ಮಾಡಿ. ನಾನು ವರ್ಷದಿಂದ ಸುಮಂಗಲಿಯರನ್ನೆಲ್ಲ ಪೂಜಿಸಿದ್ದೇನೆ. ಹಿರಿಯರಿಂದ ಆಶೀರ್ವಾದವನ್ನು ಪಡೆದಿದ್ದೇನೆ. ಈ ಒಂದುದಿನವು ಮಂಗಳವನ್ನು ನೋಡಲೆಂದು ಒಂದುವರ್ಷದ ಕಠಿನಜೀವನವನ್ನು ನಡೆಯಿಸಿದೇನೆ. ಎಷ್ಟು ಕಠಿನವಾದ ವ್ರತವೋ ದೇವರೇ ಬಲ್ಲ.

ನಾನು ವ್ರತದಲ್ಲಿರುವುದಲ್ಲದೆ ನನ್ನ ನಾಥನನ್ನು ವ್ರತದಲ್ಲಿಯೇ ನಿಲ್ಲಿಸಿದ್ದೇನೆ.

ನಾರದ.—ಆಹಾ, ಅದೇನು? (ಸಾವಿತ್ರಿ ಮುಖನ್ನುತಗ್ಗಿಸಿ ಸುಮ್ಮನಿರುವಳು.) ಬ್ರಹ್ಮಚರ್ಯವೇ?

ಸಾವಿತ್ರಿ.—ಹೌದು.

ನಾರದ.—ನನಗೆ ತೋರಲಿಲ್ಲ. ಇದೇನು ತಾಯಿ ಸಾವಿತ್ರಿ, ಇಂಥಾ ಕೆಲಸ ಮಾಡುವರೆ?

ಸಾವಿತ್ರಿ.—(ಭಯದಿಂದ) ಏಕೆ?

ನಾರದ.—ಈ ಸಂಬಂಧದಿಂದ ಮದ್ರದೇಶಾಧಿಪತಿಯ ಮನೆಗೂ ನಾಲ್ವರ ಮನೆತನಕ್ಕೂ ಒಬ್ಬ ಉತ್ತರಾಧಿಕಾರಿಯು ಉಂಟಾಗಬಹುದೆಂದು ನೆನೆದಿದ್ದೆನು. ನಿಮ್ಮ ತಂದೆಗೆ ಈ ಆಸೆ ಇತ್ತು. ಇದೇಕೆ ಹೀಗೆ ಮಾಡಿದೆ?

ಸಾವಿತ್ರಿ.—ಏನೋ ಮಾಡಿದೆ.

ನಾರದ.—(ಯೋಚಿಸಿ) ಒಳ್ಳೆಯದೇ ಆಯಿತು. ಇಷ್ಟಕ್ಕೆ ನೀನು ಎಲ್ಲಾ ವಿಷಯವನ್ನು ಚೆನ್ನಾಗಿ ತಿಳಿದವಳು. ಮುಖ್ಯ ಭಯವನ್ನು ಮುಂದೆ ಹೋಗುವುದಕ್ಕೆ ಬಿಡಬೇಡ, ಬುದ್ಧಿ ಮುಂದೆ ಇರಲಿ. ನಾನೂ ಇಲ್ಲಿ ಇಲ್ಲಿಯೇ ಇರುತ್ತೇನೆ. ಭಯಪಡಬೇಡ.

ಸಾವಿತ್ರಿ.—ತಮ್ಮ ಧೈರ್ಯದಿಂದ ನಾನು ಇಷ್ಟರಮಟ್ಟಿಗೆ ಇದ್ದೇನೆ. ತಮ್ಮ ಆಶೀರ್ವಾದದಿಂದ ನನಗೆ ಇಂದು ಒಳ್ಳೆಯದಾಗಬೇಕು. ನಮಸ್ಕರಿಸುವೆನು.

ನಾರದ.—ನಮ್ಮಮ್ಮ, ದೀರ್ಘಸುಮಂಗಲಿಯಾಗಿ ಬಾಳು.

ಸಾವಿತ್ರಿ.—ನಮ್ಮ ತಾಯಿ ಹತ್ತಿರ ಇದ್ದಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಅವರೂ ಬರಬಹುದು ಎಂತ ಇದ್ದೆ. ಬರಲಿಲ್ಲ.

ನಾರದ.—ಅಮ್ಮಾ, ಈ ಕಷ್ಟದಲ್ಲಿ ಯಾರೂ ನೆರವಲ್ಲ. ಶ್ರೀಹರಿಯೇ ನಿನ್ನ ನೆರವು. ನಾನು ಹೊರಡುತ್ತೇನೆ. ನೀನು ನಿನ್ನ ನಾಥನಬಳಿಗೆ ನಡೆ.

ಏತಕೆಭಯವಿದು ಎಂಬನು ಶ್ರೀಹರಿ
ಕಾತರರಾಗುವುದೇತಕೆ ಎಂಬನು ॥

(ಎಂದು ಹಾಡುವನು. ಸಾವಿತ್ರಿ ಒಂದುಕಡೆಗೆ ಹೋಗುವಳು.) ದೇವದೇವನು ಇವಳಲ್ಲಿ ಕೃಪೆಯನ್ನು ತೋರಲಿ. ಇವಳಾದರೋ ತನ್ನ ಪತಿಯನ್ನು ರಕ್ಷಿಸಿಕೊಳ್ಳುವುದಕ್ಕೆ ಸರ್ವಪ್ರಯತ್ನವನ್ನು ಮಾಡಿರುವಳು. ಇದು ಎಂತಹ ಕಠಿನವ್ರತಾಚರಣೆ.

(ಕಂದ)

ಉಪವಾಸದಿದೇಹಂ ಸ್ಥಿರ
ತಪದಿಂ ಮನಮಿಂತು ಸೂಕ್ಷ್ಮಮಾಗಿರೆ ಬರುವಾ
ಅಪಮೃತ್ಯುಶತ್ರುವಂತಾ
ನುಪಘಾತಿಸೆ ಸಾಣೆವಿಡಿದ ಬಾಳಿನೆ ತೋರ್ವಳ್ ॥

ಮೃತ್ಯುದೇವನ·ಇಂದಿನ ಕಾರ್ಯವು ಸುಲಭವಲ್ಲ. ಶ್ರೀಹರಿಯೆ! ನೀನು ಇವಳನ್ನು ರಕ್ಷಿಸು. (ಎಂದುಹೇಳಿ ಹೊರಡುವನು. ತರುವಾಯ ಸತ್ಯವಾನನು ಆರ್ತಧ್ವನಿಯಿಂದ)

ಸತ್ಯವಾನ.—ದೇವೀ!

ಸಾವಿತ್ರಿ.—ನಾಥ!

ಸತ್ಯವಾನ.—ಬಂದೆಯಾ?

ಸಾವಿತ್ರಿ.—ಇದೋ ಬಂದೆ. (ಇಬ್ಬರೂ ಪ್ರವೇಶಿಸುವರು) ಏನು? ಏನಾಗುತ್ತಿದೆ?

ಸತ್ಯವಾನ.—(ತಲೆಯನ್ನು ಹಿಡಿದುಕೊಂಡು) ನನಗೆ ಬಹಳ ತಲೆ ನೋಯುತ್ತಿದೆ. ಮಹರ್ಷಿಗಳು ಹೊರಟುಹೋದರೆ?

ಸಾವಿತ್ರಿ.—ಹೊರಟುಹೋದರು. ನಿಮಗೆ ಏನಾಗುತ್ತಿದೆ ಹೇಳಿ. ಬಹಳ ಆಯಾಸವೇ? ಬನ್ನಿ ಇಲ್ಲಿ ಕುಳಿತುಕೊಳ್ಳೋಣ.

ಸತ್ಯವಾನ.—ಬಹಳ ತಲೆ ನೋವು. ಸಂಕಟ.

ಸಾವಿತ್ರಿ.—ನನ್ನ ತೊಡೆಯಮೇಲೆ ತಲೆ ಇಟ್ಟುಕೊಂಡು ಮಲಗುವಿರಾ?

ಸತ್ಯವಾನ.—(ತಲೆಯನ್ನು ಆಡಿಸುವನು.) ಆದರೆ ನೀನೇನು ಭಯಪಡಬೇಡ.

ಸಾವಿತ್ರಿ.—ನನಗೆ ಭಯವಿಲ್ಲ. ಬನ್ನಿ. ನೀವು ಸುಖವಾಗಿದ್ದರೆ ಸಾಕು. ನಾನು ಯಾವುದಕ್ಕೂ ಭಯಪಡುವುದಿಲ್ಲ. (ಸಾವಿತ್ರಿಯು ಕುಳಿತುಕೊಳ್ಳುವಳು. ಸತ್ಯವಾನನು ಅವಳ ತೊಡೆಯಮೇಲೆ ತಲೆಯನ್ನಿಟ್ಟುಕೊಂಡು ಮಲಗುವನು.)

ಸತ್ಯವಾನ.—ಆಹ—ಆಹ ಇದೇನು ತಲೆನೋವು. ಇಂಥ ನೋವು ಉಂಟೆ?

ಸಾವಿತ್ರಿ.—ನಾನು ತಲೆಯನ್ನು ಹಿಡಿದುಕೊಳ್ಳಲೆ? (ತಾನೇ) ದೇವದೇವ ಯಾವುದು ಹೇಗಾಗಬೇಕೆಂದು ನಿನ್ನ ಇಚ್ಛೆಯೋ ಹಾಗೆ ಆಗಲಿ. ಆದರೆ ಇವರಿಗೆ ಈ ನೋವನ್ನು ಬೇಗೆ ಕೊಡಬೇಡ. ನಾನು ನೋಡಿ ಧರಿಸಲಾರೆ.

ಸತ್ಯವಾನ.—ನನಗೇನೋ ಮಂಕು ಮುಚ್ಚುತ್ತಿದೆ. ನಿದ್ರೆ ಬರುವಂತೆ ಇದೆ.

ಸಾವಿತ್ರಿ.—ನಿದ್ರೆ ಬರುವುದಾದರೆ ನಿದ್ರೆ ಹೋಗಿ. (ತಾನೇ) ಇದು ಇವರಿಗೆ ನಿದ್ರೆಯೇ ಆಗಲಿ. ದೇವರೆ ನೀನು ಇದನ್ನು ಪರಿಪಾಲಿಸು. (ಸತ್ಯವಾನನು ನಿದ್ರಿಸುವನು. ಸಾವಿತ್ರಿಯು ಅವನನ್ನು ತಟ್ಟಿ ಮುಂಗುರುಳುಗಳನ್ನು ಒಂದುಕಡೆಗೆ ನೂಕಿ) ದೇವದೇವ. ಇಂದು ನನಗೆ ಒಳ್ಳೆಯದನ್ನು ಮಾಡು. ಯಾವುದಾಗುವುದೋ ಅದು ನನಗೆ ತಿಳಿದು ಆಗಲಿ. ನಾನು ಮೂರು ರಾತ್ರಿಯಿಂದ ಒಂದೇ ಮನಸ್ಸಾಗಿ ಇದನ್ನು ಪ್ರಾರ್ಥಿಸಿದ್ದೇನೆ. ಇದನ್ನು ನನಗೆ ನಡೆಯಿಸಿಕೊಡು. ದೇವಿಯರೆ ನಿಮ್ಮ ಕೃಪೆಯು ನನ್ನಲ್ಲಿ ಸಂಪೂರ್ಣವಾಗಿರಲಿ.

(ಕಂದ)

ಆವಳಕೃಪೆಯಿಂದೆನ್ನನು
ಪಾವನಮತಿ ಪಿತನುಪೆತ್ತನಂತಪ್ಪಪ್ಪಯಂ
ಭೂವಿನಸುದತಿಯೆ ಮಾತೆಯೆ
ಸಾವಿತ್ರೀದೇವಿ ನೀನೆ ಪೊರೆಯುವುದೆನ್ನಂ ॥

ಅರೆಕ್ಷಣವುಂ ಬಿಡಲಾರದೆ
ಎರೆಯನಹೃದಯದೊಳಗಸಿತಸರಸಿಂದಿರುವಾ
ಸಿರಿದೇವಿಯೆ ಎನ್ನೆರೆಯನ
ಕರುಣಿಸುತಿಂದೆನಗೆ ಸಲಿಸಿಕೊಡುವುದು ತಾಯೇ ॥

ಮಂಗಳಗೌರಿಯೆ ತಾಯೇ
ಅಂಗಜವಿಧ್ವಂಸಿಯೊಲಿದ ಶುಭಕರಿ ಎನ್ನೀ
ಕಂಗಳಿವಿಂದಿನ ದಿನದೋಳ್
ಮಂಗಳವನೆ ಕಾಣುವಂತೆ ಪೊರೆಯುವುದೆನ್ನಂ ॥

ಸರ್ವಮಂಗಳೆ, ದೇವೀ ಸಾವಿತ್ರೀ, ಲೋಕಮಾತೇ ನೀವೆಲ್ಲ ಇಂದು ನನಗೆ ನೆರವಾಗಬೇಕು. ನನ್ನ ನಾಥನ ಪ್ರಾಣಗಳನ್ನು ಉಳಿಸಿಕೊಡಬೇಕು. ನನ್ನ ಸರ್ವವೂ ಈ ಮಾಂಗಲ್ಯವೇ ಎಂದು ದೇವಿಯರಾದ ನೀವು ಬಲ್ಲಿರಿ. (ತಾಯನ್ನು ನೆನೆದುಕೊಂಡು) ಅಮ್ಮ ಈ ಕಾಡಿನಲ್ಲಿ ನಾನು ಒಂಟಿಯಾಗಬೇಕೆ? (ಕಣ್ಣಿನಿಂದ ನೀರನ್ನು ಕೊಡವಿ) ದೇವದೇವ ನನಗೆ ಧೈರ್ಯವನ್ನು ಕೊಡು. ಅಳಲೇ ಬೇಕೆಂದು ವಿಧಿ ಇದ್ದರೆ ಅಳುವುದಕ್ಕೆ ಆಮೇಲೆ ದಿನವಿದೆ. ಈಗ ಭಯದಿಂದ ಕಾರ್ಯ ಕೆಡಬಾರದು. (ಎಂದು ಸ್ಥಿರನಾಗಿ) ನನಗೆ ತಿಳಿಯದೆ ಈ ಜೀವನು ಇಲ್ಲಿಂದ ನಡೆಯದೇ ಇರಲಿ. (ಕೈಮುಗಿದು) ದೇವದೇವ, ಕರುಣಾಕರ, ದೀನರಕ್ಷಕ. (ಪತಿಯ ಹಣೆಯನ್ನು ಮುಟ್ಟಿ) ನಾಥಾ

ಸತ್ಯವಾನ.—ದೇವೀ.

ಸಾವಿತ್ರಿ.—ಹೇಗಿದೆ?

ಸತ್ಯವಾನ.—ಈಗ ನೋವು ಕಡಿಮೆಯಾಗಿದೆ. ಇದೇನು ಮರಣಯಾತನೆಯೋ ಎನ್ನುವ ಹಾಗಿತ್ತು, ನೋಡು. ಬಹು ದಿನ ಜೊತೆಯಾಗಿದ್ದ ದೇಹವನ್ನು ಬಿಡುವುದಕ್ಕೆ ಜೀವನು ಒಪ್ಪಲಿ ಎಂದು ದೇವರು ಇಂಥಾ ನೋವನ್ನು ಕೊಡಬಹುದು. ಯಾರೂ ಇಲ್ಲದಾಗ ನಿನ್ನನ್ನು ಇಲ್ಲಿ ಬಿಟ್ಟು ಹೋಗುವೆನೋ ಎಂದು ತೋರಿತು.

ಸಾವಿತ್ರಿ.—ಈಗ ನೋವು ಇಲ್ಲವೆ? ನಿಜವಾಗಿ?

ಸತ್ಯವಾನ.—ಇಲ್ಲ. ಕಡಿಮೆಯಾಯಿತು. ಆಶ್ರಮಕ್ಕೆ ಹೋಗೋಣ.

ಸಾವಿತ್ರಿ.—ದೇವಿಯರಾ, ಇದು ನಿಮ್ಮ ಕೃಪೆಯೋ? ಬರಿಯ ಆಸೆಯಿಂದ ನನ್ನ ಪ್ರಾಣವನ್ನು ತೊಳಲಿಸದಿರು, ದೇವದೇವ.

ಸತ್ಯವಾನ.—(ಒಂದುಕಡೆಗೆ ತಿರುಗಿ) ಆಹಾ! ನನಗೆ ಸ್ವಲ್ಪವಾದರೂ ತ್ರಾಣವಿಲ್ಲ. (ಎಂದು ರಂಗದ ಒಂದುಕಡೆಗೆ ದೃಷ್ಟಿಸಿ ನೋಡುತ್ತಾ) ಅದು ಯಾರು?

(ಕಂದ)

ಧೀರಂ ಕೃಷ್ಣಂ ಬೃಹದಾ
ಕಾರಂ ಗಂಭೀರಭಾವದಿಂನೆರೆನೋಳ್ಪಾ
ಧೀರತರ ರಕ್ತನೇತ್ರಂ
ಆರೀತಂ ಸೌಮ್ಯರೂಪಿ ದೇವಂ ನಿಲ್ಪಂ ॥

ಸಾವಿತ್ರಿ.—ದೇವದೇವ ನನಗೆ ನೆರವಾಗು.... ನಾಥ ನೀವು ಆಕಡೆ ನೋಡಬೇಡಿ. ಇಲ್ಲಿ ತಿರುಗಿ.

ಸತ್ಯವಾನ.—ನನಗೇನೂ ಭಯವಿಲ್ಲ.... ಹಾ ಮತ್ತೆ ನಿದ್ರೆ ಬರುವುದಲ್ಲ!

ಸಾವಿತ್ರಿ.—ಹೀಗೆ ಮಲಗಿ (ಎಂದು ಅವನನ್ನು ಭದ್ರವಾಗಿ ಹಿಡಿದುಕೊಂಡು ಸತ್ಯವಾನನು ನೋಡಿದ್ದ ಕಡೆ ನೋಡುತ್ತಾ) ಧೀರಾಕಾರನಾಗಿ ನನ್ನ ನಾಥನ ಕಣ್ಣಿಗೆ ಕಂಡ ದೇವನೇ ನನ್ನ ಕಣ್ಣಿಗೆ ಕಾಣು. ನಿನ್ನನ್ನು ನೋಡಲೆಂದು ನಾನು ವರ್ಷವೂ ಯತ್ನಮಾಡಿದ್ದೇನೆ.

(ಧರ್ಮದೇವನು ಮುಂದಕ್ಕೆ ಬಂದು ಕಾಣಿಸಿಕೊಳ್ಳುವನು.)

ದೇವಾ ನೀವು ಯಾರು? (ಧರ್ಮದೇವನು ಸುಮ್ಮನೆ ನೋಡುತ್ತಿರುವನು.) ದೇವ ಇದನ್ನು ನನಗೆ ಹೇಳಬೇಕು.

ಧರ್ಮ.—ನನ್ನನ್ನು ಯಮನೆಂದೂ ಧರ್ಮನೆಂದೂ ಹೇಳುವರು.

ಸಾವಿತ್ರಿ.—ಯಾರ ಅಮೋಘವಾದ ನ್ಯಾಯವಿಮರ್ಶೆಯಿಂದ ಲೋಕವೆಲ್ಲವೂ ಧರ್ಮದಲ್ಲಿ ನಡೆಯುವುದೋ ಆ ಧರ್ಮದೈವವೇ ನೀವು. ಮಹಾಮಹಿಮ, ತಾವು ಇಷ್ಟುದೂರ ದಯಮಾಡಿಸಿದುದೇನು?

ಧರ್ಮ.—ಅಮ್ಮಾ, ನೀನು ಯಾವ ಶಕ್ತಿಯಿಂದ ನನ್ನನ್ನು ನೋಡಿಯೂ ಜೀವಿಸಿರುವೆಯೋ? ನನ್ನನ್ನು ಹೀಗೆ ಮಾತನಾಡಿಸುತ್ತಿರುವೆಯೊ? ಆದರೂ ಹೇಳುವೆನು ಕೇಳು. ನಾನು ಇಲ್ಲಿರುವ ಈ ಸತ್ಯವಾನನೆಂಬಾತನ ಜೀವವನ್ನು ಕೊಳಲು ಬಂದಿರುವೆನು.

ಸಾವಿತ್ರಿ.—ಧರ್ಮದೇವ, ನೀವು ಎಷ್ಟು ದಯಾಪರರು! ನನ್ನ ಕಣ್ಣಿಗೆ ಕಂಡು ನನ್ನ ಪ್ರಶ್ನೆಗೆ ಇಷ್ಟು ಸಮಾಧಾನವಾಗಿ ಉತ್ತರ ಹೇಳುವಿರಲ್ಲ. ತಿಳಿಯದವರು ನಿಮ್ಮನ್ನು ಕ್ರೂರಹೃದಯರೆನ್ನುವರು. ತಾವು ನಿಜವಾಗಿಯೂ ಅಪರಿಮಿತಕಾರುಣ್ಯಸ್ವರೂಪರಾಗಿದ್ದೀರಿ. ದೇವ, ಜೀವಗಳನ್ನು ಕೊಂಡುಹೋಗುವುದಕ್ಕೆ ತಮ್ಮ ಸೇವಕರು ಬರುವರೆಂದು ಕೇಳಿ ಬಲ್ಲೆ. ಇಲ್ಲಿ ತಾವೇ ದಯಮಾಡಿಸಿರುವುದು ಹೇಗೆ.

ಧರ್ಮ.—ಮಹಿಳಾಮಣಿ, ಕೇಳು.

(ಕಂದ)

ಸಾವಿಗೆ ಬಲಿಯೆನೆ ಬಹರಂ
ಸೇವಕರಂ ಕಳುಹಿಸುತ್ತೆ ಕರೆಯಿಸಿಕೊಳ್ವೆಂ
ಪಾವನರೆನಿಸುತೆ ಬಾಳ್ದರ
ಜೀವಗಳಂ ಕೊಳಲು ನಾನೆ ಬರುವೆಂ ತರುಣೀ ॥

ಈತನು ಪಾವನಜೀವನನು. ಅದರಿಂದ ನಾನೇ ಬಂದೆನು.

ಸಾವಿತ್ರಿ.—ದೇವ, ತಮ್ಮ ಧರ್ಮವು ವಿಮರ್ಶೆಯಿಂದ ತುಂಬಿದೆ. ಆದರೆ ಮಹಾಮಹಿಮ, ಇಂದು ಇವರ ಜೀವವನ್ನು ಏತಕ್ಕೆ ತೆಗೆದುಕೊಂಡು ಹೋಗಬೇಕು? ಪಾವನಜೀವನವೆನ್ನುವಿರಿ. ಅಲ್ಲದೆ ಬಹಳ ಚಿಕ್ಕ ವಯಸ್ಸಿನವರು. ಇವರ ತಂದೆ ತಾಯಿಗಳಿಗೆ ಒಬ್ಬರೇ ಮಗ. ಅವರಿಗೆ ಇವರನ್ನು ಬಿಟ್ಟರೆ ದಿಕ್ಕಿಲ್ಲ. ಇನ್ನೂ ಒಂದು ವರುಷವಿಲ್ಲ,

ನನ್ನನ್ನು ಮದುವೆಯಾದರು. ಇಂಥಾ ಜೀವವನ್ನು ಇಷ್ಟು ಬೇಗ ಏತಕ್ಕೆ ತೆಗೆದುಕೊಂಡು ಹೋಗಬೇಕು?

ಧರ್ಮ—ಅಮ್ಮಾ ನಿನ್ನ ಮಾತು ಬಹಳ ವಿನಯವಾಗಿದೆ. ಆದರೆ ಇದಕ್ಕೆ ನಾನು ಉತ್ತರವನ್ನು ಹೇಳಲಾರೆ.

ಸಾವಿತ್ರಿ.—ದೇವ, ಇಷ್ಟು ಮಾತನ್ನು ಹೇಳಿ ನನ್ನನ್ನು ಪರಿಪಾಲಿಸಿದ್ದೀರಿ. ಇದಕ್ಕೆಲ್ಲ ಉತ್ತರ ಹೇಳುವುದಕ್ಕೆ ತಮಗೆ ಇಷ್ಟವಿಲ್ಲದಿದ್ದರೆ ತಾವು ಆಯಾಸ ತೆಗೆದುಕೊಳ್ಳಬೇಡಿ. ನನ್ನ ನಾಥನನ್ನು ನನಗೆ ಬಿಟ್ಟು ಹೋದರೆ ಅಷ್ಟೇ ಸಾಕು.

ಧರ್ಮ.—ಅಮ್ಮಾ, ಅದು ಸಾಧ್ಯವೇ ಅಲ್ಲ.

ಸಾವಿತ್ರಿ.—ತಾವು ಹಾಗೆಂದರೆ ಇಲ್ಲಿ ಬಹಳ ಜನರ ಹೊಟ್ಟೆ ಉರಿಯುವುದು.

ಧರ್ಮ.—ಅಮ್ಮಾ, ಅದಕ್ಕೆ ನಾನು ಏನೂ ಮಾಡುವಹಾಗಿಲ್ಲ. ವಿಧಿನಿಯಾಮಕವನ್ನು ನಡೆಯಿಸುವುದು ಮಾತ್ರ ನನ್ನ ಕೆಲಸ.

ಸಾವಿತ್ರಿ.—ದೇವಾ......

ಧರ್ಮ.—ಅದನ್ನು ನಿಲ್ಲಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. (ಎಂದು ಸತ್ಯವಾನನ ಜೀವವನ್ನು ಆಕರ್ಷಿಸತೊಡಗುವನು)

ಸಾವಿತ್ರಿ.—ನನ್ನ ಸಮ್ಮತಿಯಿಲ್ಲದೆ ತಾವು ಈ ಜೀವವನ್ನು ತೆಗೆದುಕೊಂಡು ಹೋಗಲಾಗದು.

ಧರ್ಮ.—ಅಮ್ಮಾ, ಇದು ಯಾರ ಸಮ್ಮತಿಗೂ ಕಾಯುವ ಸಂದರ್ಭವಲ್ಲ. ಇಗೋ ಈತನು ನಿನ್ನನ್ನು ಬಿಡಲಾರದೆ ತೊಳಲುತ್ತಿದ್ದಾನೆ. ಆದರೆ ಏನು ಉಪಯೋಗ? ವಿಧಿಯನ್ನು ಮೀರಲು ಯಾರಿಂದಲೂ ಆಗದು. (ಎಂದು ಜೀವವನ್ನು ಆಕರ್ಷಿಸಿ ಮುಗಿಸುವನು.)

ಸಾವಿತ್ರಿ.—(ಪತಿಯನ್ನು ನೋಡಿ) ನಾಥಾ, ಪ್ರಾಣಕಾಂತಾ, ಅಯ್ಯೋ— (ಎಂದು ಧೈರ್ಯ ತಂದುಕೊಂಡು) ಧರ್ಮದೇವ, ಕರುಣಾಕರ, ಹಾ,

ನೀನು ಹೊರಟೆಯಾ! (ಧರ್ಮನು ಹೊರಡಲಾರಂಭಿಸುವನು) ನಾನು ನನ್ನ ನಾಥನನ್ನು ಬಿಟ್ಟಿರಲಾರೆ. ನಾನೂ ಬರುತ್ತೇನೆ. (ಎಂದು ಎದ್ದು ಸತ್ಯವಾನನ ದೇಹವನ್ನು ಕೆಳಕ್ಕೆ ಇರಿಸಿ) ನನ್ನ ನಾಥನ ಜೀವಕ್ಕೆ ಆಶ್ರಯವಾಗಿದ್ದ ಈ ದೇಹವನ್ನು ನಾನು ಬರುವವರೆಗೆ ಪಂಚಭೂತಗಳಿರಾ ನೀವು ರಕ್ಷಿಸಿ. ನನ್ನ ವ್ರತಗಳೆಲ್ಲ ಇದನ್ನು ವಿರೂಪವಾಗದಂತೆ ರಕ್ಷಿಸಲಿ. ಲೋಕಮಾತೆ, ನನ್ನ ಪಾತಿವ್ರತ್ಯದಿಂದ ನೀನು ಸಂತುಷ್ಟಳಾಗಿದ್ದರೆ ಈ ದೇಹವನ್ನು ಪ್ರಿಯರಾದವರು ವಿನಾ ಇನ್ನು ಯಾರೂ ಈ ಆವರಣದೊಳಗೆ ಬಂದು ಸೋಂಕಲಾಗದಿರಲಿ (ಎಂದು ಪತಿಯ ದೇಹಕ್ಕೆ ಪ್ರದಕ್ಷಿಣೆಯನ್ನು ಮಾಡಿ ಕೊನೆಗೆ ಕಾಲನ್ನು ಮುಟ್ಟಿ ಕಣ್ಣಿಗೆ ಒತ್ತಿಕೊಂಡು) ಅಮ್ಮಾ ನೀನು ಈಗ ಹತ್ತಿರ ಇಲ್ಲದೆ ಹೋದೆಯಾ, (ಎನ್ನುತ್ತಾ ಕಣ್ಣೀರನ್ನು ಕೊಡವಿ, ಧೈರ್ಯವನ್ನು ತಂದುಕೊಂಡು) ದೇವೀ ಶಂಕರೀ

(ಕಂದ)

ಮಂಗಳಗೌರಿಯೆ ತಾಯೆ ಭು
ಜಂಗವನಾಭರಣವೆನಿಸಿ ತಳೆದನರಾಣೀ
ಮಂಗಳೆ ಮಾಂಗಲ್ಯವಿದಕೆ
ಭಂಗಂಬಾರದವೊಲೆನ್ನ ಪೊರೆ ಕಲ್ಯಾಣೀ ॥

(ಎಂದು ಸ್ತೋತ್ರಮಾಡಿ ಪತಿಯ ದೇಹವನ್ನು ಮತ್ತೆ ನೋಡಿ ಧರ್ಮನನ್ನು ಹಿಂಬಾಲಿಸುವಳು. ಕಳೇಬರವನ್ನು ಮರೆಯಿಸುವಂತೆ ಪರದೆ ಬೀಳುವುದು. ನಾರದನು ರಂಗದ ಮುಂಗಡೆ ನಡೆದು ಹೋಗಿ ಪರದೆಯ ಒಳಗೆ ಬರುವನು. ಪರದೆ ಮತ್ತೆ ಏಳುವುದು. ಕಳೇಬರ ಇರುವುದಿಲ್ಲ.)

ನಾರದ —(ರಂಗದ ಒಂದುಕಡೆ ನೋಡಿ) ಪತಿಯ ದೇಹಕ್ಕೆ ರಕ್ಷೆಯನ್ನು ಹೇಳಿ ಧರ್ಮನನ್ನು ಹಿಂಬಾಲಿಸಿದಾಳೆ. ಸತ್ಯವಾನನ ದೇಹವು ನಿದ್ರೆಯಲ್ಲಿರುವಂತೆ ಸೌಮ್ಯವಾಗಿಯೂ, ಶುಭ್ರವಾಗಿಯೂ ಇದೆ. ಶ್ರೀಹರಿಯೆ, ಈ ವೀರಪತ್ನಿಗೆ ಸಹಾಯನಾಗು. ಈ ದುಃಖದಲ್ಲಿ ಶಾಂತಿಯನ್ನು ತಾ.

(ವೃತ್ತ)

ಹೂವನೆ ನೆಮ್ಮಿಸಿಂದ ಭ್ರಮರಂ ತಿರಿಯುತ್ತದಕೊಂಡುಪ್ಪೋಪಸಂ
ಸೋವುತಲೆಂತವಂ ಬಡಿದೊಡಂ ಬಿಡಲಾರದೆ ಪಿಂತೆಸಾರ್ವವೋಲ್
ಈ ವನಿತಾಶಿರೋಮಣಿಯು ನಾಥನನಾಶಿಸಿ ಸಾರುತಿರ್ದಪಳ್
ಕಾವುದು ಶ್ರೀಶ ನೀಂ ಕರುಣೆಯಿಂದರಿವಿಲ್ಲದ ಬಾಲೆಯೀಕೆಯಂ ॥

ಅಶ್ವಪತಿಯು ಪಾವನಜೀವನವನ್ನೆಣಿಸು. ದ್ಯುಮತ್ಸೇನನ ದುರವಸ್ಥೆಯನ್ನೆಣಿಸು. ಈ ದಿಕ್ಕಿಲ್ಲದ ಬಾಲೆಗೆ ನೆರವಾಗು. (ಎಂದು ಭಜಿಸುವನು.)

(ರಾಗ ಪೂರ್ವಕಲ್ಯಾಣಿ.)

ಹರಿಯೇ ದಯೆತೋರ್ಯೆ ಇವಳನು
ಅರಿಯದ ಬಾಲೆಯೆನ್ನುತೆ ರಕ್ಷಿಸು ॥

ಕರಿಬಲಿಧ್ರುವರನು ಪೊರೆದೊಡೆ ಏನು
ಪೊರೆದೆನು ಪ್ರಹ್ಲಾದನ ಎಂದರೇನು
ಕರುಣೆಯುನನಿಶವುತೋರ್ಪನು ಕರುಣಿಯು
ಅರೆಕ್ಷಣ ಕರುಣೆಯ ಮರೆಯನು ಕರುಣಿಯು ॥

ಲೋಕವನೆಲ್ಲವ ರಕ್ಷಿಪುದೆನ್ನುವ
ಏಕಕಾರ್ಯದಲಿನಿಂದಿಹ ನೀನು
ಸಾಕುಮಾಡುತೀ ಬಾಲೆಯಬಾಳನು
ನೂಕುವರೇ ಹರಿ ದುಃಖದಕಡಲಿಗೆ ॥

ಅರಿಯದಬಾಲೆಯ ರಕ್ಷಿಸು ಶ್ರೀಹರಿ
ಹರೆಯದಬಾಲನ ಉಳಿಸೈ ಶ್ರೀಹರಿ
ಕರುಣಾಕರ ನೀನೆಂಬುದತೋರ್ಯೆ
ಮರೆಯದೆ ಭಕ್ತರ ನೀದಿನ ಪೊರೆಯೈ ॥

(ಎಂದು ಗಾನಮಾಡುತ್ತಾ ಹೋಗುವನು. ರಂಗದ ಒಳಗಡೆ ಮುಂದೆ ಧರ್ಮನೂ ಹಿಂದೆ ಸಾವಿತ್ರಿಯೂ ಬರುವರು.)

ಧರ್ಮ.—ಅಮ್ಮಾ ನೀನು ಸುಮ್ಮನೆ ನನ್ನ ಹಿಂದೆ ಏಕೆ ಬರುತ್ತಿರುವೆ?

ಸಾವಿತ್ರಿ.—ಧರ್ಮದೇವನೆ. ನಾನು ಅರಿಯದಬಾಲೆ. ನನ್ನಿಂದ ನಿನ್ನ ವಿಷಯದಲ್ಲಿ ಒಂದು ಅಪಚಾರ ನಡೆಯಿತು. ಆ ತಪ್ಪನ್ನು ಮನ್ನಿಸಬೇಕು.

ಧರ್ಮ.—ಏನು!

ಸಾವಿತ್ರಿ.—ನೀನು ಮಹಾಮಹಿಮನು. ಲೋಕವೆಲ್ಲ ನಿನಗೆ ಅಧೀನವಾಗಿ ನಡೆಯುತ್ತದೆ. ಇಂಥ ನೀನು ಬಂದಾಗ ನನ್ನಪತಿಯ ವಿಷಯದಲ್ಲಿ ನನ್ನ ಮನಸ್ಸು ಕಾತರವಾಗಿದ್ದದ್ದರಿಂದ ನಾನು ನಿನಗೆ ನಮಸ್ಕಾರ ಮಾಡಲಿಲ್ಲ. ಇದನ್ನು ನೋಡಿ ನೀನು ನಮ್ಮ ತಾಯಿ ತಂದೆಗಳು ನನ್ನನ್ನು ಹೇಗೆ ಸಾಕಿದರೊ ಎಂದು ಕೊಂಡಿರಬಹುದು. ಧರ್ಮದೇವ, ಅದು ಕೇವಲ ನನ್ನ ತಪ್ಪುಮಾತ್ರ. ಅದನ್ನು ಮನ್ನಿಸು. ಇಗೋ ಈಗ ನಮಸ್ಕಾರ ಮಾಡುತ್ತೇನೆ. (ಎಂದು ನಮಸ್ಕರಿಸುವಳು.)

ಧರ್ಮ.—ದೀರ್ಘಸು ......(ಎಂದು ನಿಲ್ಲಿಸಿ) ಅಮ್ಮಾ ಇದೇನೂ ಬೇಡ. ನಿನ್ನ ದುಃಖದಲ್ಲಿ ನೀನಿದನ್ನೆಲ್ಲಾ ಹೇಗೆ ನೋಡಬೇಕು. ಇರಲಿ ನಡೆ.

ಸಾವಿತ್ರಿ.—ಧರ್ಮದೇವನೆ, ಆಶೀರ್ವಾದವನ್ನು ಅರ್ಧದಲ್ಲಿ ನಿಲ್ಲಿಸುವರುಂಟೆ?

ಧರ್ಮ.—ಅಮ್ಮಾ, ಇಂದು ನಿನ್ನ ವಿಷಯದಲ್ಲಿ ಯಾವ ಆಶೀರ್ವಾದವನ್ನೂ ಮಾಡುವಂತಿಲ್ಲ.

ಸಾವಿತ್ರಿ.—ಆದರೆ ಅದನ್ನು ಮನಸ್ಸಿನಲ್ಲಿ ಎಣಿಸಿದೊಡನೆಯೇ ಅದು ಆಶೀರ್ವಾದವಾಯಿತು. ಅದನ್ನು ನುಡಿಯದೆ ಇರಬಹುದೆ?

(ವೃತ್ತ)

ಚಿರಕಾಲಂಸುಖಿಯಾಗಿ ಬಾಳೆನುತಲಾಶೀರ್ವಾದವಂ ಮಾಡೆನೋ
ಳ್ದರೆವಾತೊಳ್ನಿಲಿಸಿರ್ದರಿಂದೊದಗದೇ ದತ್ತಾಪಹಾರಂ ಕೃಪಾ
ಕರನಿಮ್ಮರ್ಧದ ಸ್ವಸ್ತಿವಾಚನದೊಲಾಯ್ತೆನ್ನಾಣ್ಮನೀಜೀವನಂ
ಅರೆಯೊಳ್ನಿಲ್ಲಿಸುತಾಶಿಷೋಕ್ತಿಯನು ದೇವಾ ಎನ್ನಕೈಬಿಟ್ಟಿರೇ ॥

ಧರ್ಮ.—ಅಮ್ಮಾ, ನೀನು ಸುಮ್ಮನೆ ದುಃಖಪಡಬೇಡ. ಇದರಿಂದ ಉಪಯೋಗವಿಲ್ಲ.

ಸಾವಿತ್ರಿ.—ಧರ್ಮದೇವ, ನೀನು ನನಗೆ ಮಾಡಿದ ಆಶೀರ್ವಾದವನ್ನು ನಡೆಯಿಸಿಕೊಡು.

ಧರ್ಮ.—ಅದಕ್ಕೆ ನನಗೆ ಅಧಿಕಾರವಿಲ್ಲ.

ಸಾವಿತ್ರಿ.—ನಾನು ಪತಿಯನ್ನು ಬಿಟ್ಟಿರಲಾರೆ. ನಿನ್ನ ಜೊತೆಯಲ್ಲಿ ಅವನು ಹೋದೆಡೆಗೆ ಬರುವೆನು.

ಧರ್ಮ.—ಇದು ನಲ್ಲದಮ್ಮಾ. ದೇಹಿ ಜೀವವು ಹೀಗೆ ಬರಬಾರದು.

ಸಾವಿತ್ರಿ.—ಧರ್ಮದೇವ. ನನ್ನ ಕಣ್ಣಿಗೆ ಕಾಣಿಸದಂತೆ ಮರೆಯಿಂದ ಈತನನ್ನು ಕರೆದುಕೊಂಡು ಹೋಗಿದ್ದರೆ ನಾನು ಏನೂ ಮಾಡಲಾಗುತ್ತಿರಲಿಲ್ಲ. ಈಗ ನೀನು ನನ್ನ ಕಣ್ಣಿಗೆ ಕಂಡು ನನ್ನೆದುರಿಗೆ ಈತನನ್ನು ಕರೆದುಕೊಂಡು ಹೋಗುತ್ತಿದ್ದರೆ ನಾನು ಬಿಟ್ಟು ಹೇಗೆ ಹೋಗಲಿ.

(ಕಂದ)

ಪತಿಪೋದೆಡೆ ಪೋದಪುದೇ
ಸತಿಗಿನು ಸದ್ಧರ್ಮಸಾರಮೆನ್ನುವರರಿದರ್
ಪತಿಯನು ಬಿಡದನವರತವು
ಜತೆಸಾರುವಸತಿಗೆ ಬಹುದು ಸದ್ಗತಿಯೆಂಬರ್ ॥

ಆದುದರಿಂದ ದೇವ ನೀನು ನನ್ನ ನಾಥನನ್ನು ಬಿಟ್ಟುಕೊಡುವುದಾದರೆ ಸರಿ. ಇಲ್ಲದಿದ್ದರೆ ನಾನು ನಿನ್ನ ಜೊತೆಯಲ್ಲಿ ನಡೆಯುವುದು ನನಗೆ ಕರ್ತವ್ಯವು. ಧರ್ಮಾಧಿದೇವತೆಯಾದ ನೀನು ಇದನ್ನು ಬೇಡವೆನ್ನಬಾರದು.

ಧರ್ಮ.—(ತಾನೇ) ಇವಳನ್ನು ಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ. (ಸಾವಿತ್ರಿಗೆ) ಅಮ್ಮಾ, ನೀನು ಸಾಹಸ ಪ್ರಯತ್ನದಲ್ಲಿ ಕೈ ಹಾಕಿದ್ದೀಯೆ. ಮೃತರಾದವರ ಜತೆಗೆ ಬದುಕಿರುವವರು ಬರುವುದುಂಟೆ? ಹಿಂದಕ್ಕೆ ನಡೆ.

ಸಾವಿತ್ರಿ.—ದೇವ, ನಾನು ಹಿಂದಕ್ಕೆ ಹೋಗಿ ಏನು ಮಾಡಲಿ?

ಧರ್ಮ.—ನಿನ್ನ ಪತಿಗೆ ಸದ್ಗತಿ ಬರಲೆಂದು ಉತ್ತರಕ್ರಿಯೆಗಳನ್ನುಮಾಡು.

ಸಾವಿತ್ರಿ.—ಅದು ಹತ್ತುದಿನ. ಆಮೇಲೆ?

ಧರ್ಮ.—ಆಮೇಲೆ ಎಂದರೆ?

ಸಾವಿತ್ರಿ.—ಆಮೇಲೆ ಏನು ಮಾಡಲಿ?

(ವೃತ್ತ)

ಎಳೆಯುಳ್ಳಾಂಬಲಮಿಲ್ಲದಳ್ ತಿಳಿವಿನೋಳೋರೊಂದುಮಂ ಕಾಣದಳ್
ಇಳೆಯಂತೀವಿದ ಸೌಖ್ಯಸಂಪದದೊಳೊಂದಂ ನೋಡದಿನ್ನೀಗಳೇ
ಒಳಪೋಗಲ್ ಬಳಿಸಂದು ಜೀವನದಬಾಗಿಲ್ಸಾರ್ದು ನಿಂದಿರ್ಪೆನ್ನೈ
ಕೊಳೆನೀಂಕಾಂತನ ಕಾಲವಂಕಳೆವೆನೆಂತೈ ಪೇಳ್ದಯಾಸಾಗರಾ ॥

ಧರ್ಮ.—ಅಮ್ಮಾ, ಈ ವಿನಯವನ್ನು ನೀನು ಎಲ್ಲಿ ಕಲಿತೆ? ನೋಡು ನನಗೆ ನಿನ್ನ ವಿಷಯದಲ್ಲಿ ದಯೆ ಇರುವುದನ್ನು ತೋರುತ್ತೇನೆ. ಈ ನಿನ್ನ ಪತಿಯ ಜೀವವೊಂದನ್ನು ಬಿಟ್ಟು ಯಾವುದಾದರೂ ಒಂದು ವರವನ್ನು ಕೇಳು. ಕೊಡುತ್ತೇನೆ.

ಸಾವಿತ್ರಿ.—ಧರ್ಮದೇವ, ಇದನ್ನು ಬಿಟ್ಟು ಎಂದರೆ ಇನ್ನು ಯಾವುದರಿಂದ ಏನಾಗುವುದು? ಆದರೂ ನೀನು ಕರುಣದಿಂದ ಕೊಡುತ್ತೇನೆಂದುದನ್ನು ನಾನು ಬೇಡವೆನ್ನಬಾರದು. ನಮ್ಮ ಮಾವನವರಿಗೆ ಕಣ್ಣಿಲ್ಲ. ರಾಜ್ಯವನ್ನು ಕಳೆದುಕೊಂಡಿದ್ದಾರೆ. ಅವರು ಕಣ್ಣನ್ನು ಪಡೆದು ಮತ್ತೆ ರಾಜ್ಯದಲ್ಲಿ ನಿಲ್ಲುವಂತೆ ಅನುಗ್ರಹಿಸಬೇಕು.

ಧರ್ಮ.—ಆಗಲಿ.

ಸಾವಿತ್ರಿ.—ನಾನು ಅನುಗೃಹೀತಳು.

ಧರ್ಮ.—ಇನ್ನು ನಡೆ. (ಎಂದು ಮುಂದಕ್ಕೆ ಹೋಗುವನು. ಸಾವಿತ್ರಿಯು ಹಿಂದೆಯೇ ಹೋಗಿ, ಇಬ್ಬರೂ ಮರೆಯಾಗುವರು. ರಂಗದ ಮುಂದುಗಡೆ ನಾರದನು ಪ್ರವೇಶಿಸುವನು.)

ನಾರದ.—ಇವಳು ವೀರ ರಮಣಿ!

(ವೃತ್ತ)

ಹರಿಣೀತಂಡವ ಕಾನನಾಂಗಣದೆ ವ್ಯಾಘ್ರಂಸೇರೆ ತಾಯ್ತಂದೆವಿರ್
ಕರುವಿಂಡಂ ನಿಲಿಸುತ್ತೆ ಮಧ್ಯದಲಿ ವ್ಯೂಹಂಗಟ್ಟಿಕಂದಂಗಳಂ
ಪೊರೆಯಲ್ತಮ್ಮೊಳುಸಂದಶಕ್ತಿಯದುರಂತಾವೇಶವಂ ತೋರ್ಪವೋಲ್
ಕರಣೌಘಂಸ್ಫುರವಾಗಿರಲ್ ಪತಿಯತಾಂಸಂರಕ್ಷಿಸಲ್ನಿಂದಿಹಳ್ ॥

ಶ್ರೀಹರಿಯು ಈಗಲೂ ಕೃಪೆ ತೋರುವುದಾದರೆ ತೋರಬಹುದು. ದೇವ ದೇವ ಇವಳನ್ನು ರಕ್ಷಿಸು. (ಎಂದು ಒಂದು ಕಡೆ ನೋಡಿ) ಇವರು ಬಂದರು.

(ದ್ಯುಮತ್ಸೇನನೂ ಅವನ ಪತ್ನಿಯೂ ಪ್ರವೇಶಿಸುವರು.)

ರಾಜ.—ನನಗೋ ಕಣ್ಣು ಕಾಣುವುದಿಲ್ಲ. ನೀನು ಒಬ್ಬಳೇ ಅವರನ್ನು ಹುಡುಕುತ್ತಾ ಹೋಗುವೆನೆನ್ನುವೆ. ಜತೆಗೆ ಯಾರನ್ನಾದರೂ ಕರೆಯೋಣವೆಂದರೆ ತಡೆಯಲಾರೆ.

ರಾಜಪತ್ನಿ.—ಅಯ್ಯೋ! ನನ್ನ ಹೊಟ್ಟೆಯಲ್ಲಿ ಕವಡುತ್ತಿದೆಯಲ್ಲಾ. ನಾನು ಈ ದುಃಖವನ್ನು ತಡೆಯಲಾರೆ. ನನ್ನಪ್ಪಾ. ನಮ್ಮಮ್ಮಾ. ಏನಾದೆಯೋ!' ಎಲ್ಲಿ ಹೋದಿರೋ!

ನಾರದ.—ಈ ದುಃಖವನ್ನು ನೋಡಲಾಗುವುದಿಲ್ಲ. (ಎಂದು ಮುಂದಕ್ಕೆ ಬಂದು) ದ್ಯುಮತ್ಸೇನರಾಜನೆ, ಎಲ್ಲಿ ಹೀಗೆ?

ರಾಜ.—ಮಹರ್ಷಿಗಳಿಗೆ ವಂದನೆ.

ನಾರದ.—ನಿಮಗೆ ಒಳ್ಳೆಯದಾಗಲಿ.

ರಾಜಪತ್ನಿ.—ಋಷಿವರ್ಯ ನಮ್ಮ ಹುಡುಗನನ್ನೂ ಹುಡುಗಿಯನ್ನೂ ಇಲ್ಲಿ ನೋಡಿದಿರಾ ?

ನಾರದ.— ನೋಡಿದೆ.

ರಾಜಪತ್ನಿ.—ಅವರು ಕ್ಷೇಮವಾಗಿರುವರೆ?

ನಾರದ.—ಅದೇಕೆ ಹಾಗೆ ಕೇಳುವಿರಿ?

ರಾಜಪತ್ನಿ.—ನನ್ನ ಮಗು ಏನಾದ?

ರಾಜ.—ಏಕೆ ಹೀಗೆ ಹೆದರುವೆ?

ರಾಜಪತ್ನಿ.—ಅವರ ಮುಖವನ್ನು ನೋಡಿ, ತಿಳಿಯುವುದು. ಅವರು ಚೆನ್ನಾಗಿದಾರೆಂದು ಹೇಳುವುದಕ್ಕೆ ಆಗದೆ? ಮಹರ್ಷಿಗಳೆ, ಅವರು ಎಲ್ಲಿ?

ನಾರದ.—ನಿಮ್ಮ ಕುಮಾರನು ಅಲ್ಲಿ ಮಲಗಿರುವನು.

ರಾಜ.—ಹ, ಮಲಗಿರುವನೆ?

ರಾಜಪತ್ನಿ.—ಎಲ್ಲಿ? ಅಯ್ಯೋ! ಏನಾಯಿತು! (ಎಂದು ಒಳಕ್ಕೆ ಹೋಗಿ ದೇಹವನ್ನು ನೋಡಿ ಹಿಂದಕ್ಕೆ ಬಂದು) ನನ್ನಪ್ಪಾ, ಏನಾಯಿತೊ? ಇಗೋ ಬನ್ನಿ ನಿಮ್ಮ ಮಗನನ್ನು ನೋಡಿಬನ್ನಿ. ನಾನು ನೂರಾರು ವ್ರತಗಳನ್ನು ಮಾಡಿ ಈ ಮಗನನ್ನು ಹೆತ್ತದ್ದು ಈ ದುಃಖವನ್ನು ನೋಡುವುದಕ್ಕಾಗಿ. ನನ್ನಪ್ಪಾ ನಾನು ನಿನ್ನನ್ನು ಕಳೆದುಕೊಂಡೆನೆ.

(ಎಂದು ಎಲ್ಲರೂ ಒಳಗೆ ಹೋಗಿ ನಾರದನೂ ರಾಜನೂ ಹಿಂದಕ್ಕೆ ಬರುವರು.)

ರಾಜ.—ಆಕೆಗೆ ಏನೋಭಯ ಹುಟ್ಟಿತು. ನನಗೂ ಆಯಾಸವಾಯಿತು. ಆದರೆ ಇದು ಎಂದು ತೋರಲಿಲ್ಲ. ಎಷ್ಟಾದರೂ ಹೆತ್ತಹೊಟ್ಟೆ. ಇದೇನಾಯಿತು. ನನಗೆ ಸ್ವಲ್ಪಹೇಳಿ.

ರಾಜಪತ್ನಿ.—(ಮತ್ತೆಬಂದು) ನಮ್ಮ ಹುಡುಗಿ ಎಲ್ಲಿ! ಆ ವ್ರತದಿಂದ ಬುದ್ಧಿ ವಿಕಲ್ಪವಾಗಿ ಇವನನ್ನು ಹೀಗೆಮಾಡಿ ಎಲ್ಲಾದರೂ ಹೋದಳೊ?

ರಾಜ.—ದೇವಿ. ಏನು ನೀನು ಹೇಳುವಮಾತು?

ರಾಜಪತ್ನಿ.—ಬೆಳಿಗ್ಗೆ ಬಂದು ನಮಸ್ಕಾರ ಮಾಡಿದಳು. ಆಶೀರ್ವಾದ ಮಾಡಿದೆ. ಮತ್ತೆ ಬಂದು ನಮಸ್ಕಾರ ಮಾಡಿದಳು. ಆಶೀರ್ವಾದ ಮಾಡಿದೆ. ಮತ್ತೆ ಬಂದು ನಮಸ್ಕಾರಮಾಡಿ ನನಗೆ ಚೆನ್ನಾಗಿ ಆಶೀರ್ವಾದ ಮಾಡಬೇಕೆಂದಳು. ವ್ರತದಿಂದ ಬಳಲಿದಾಳೆ ಎಂದು ಕೊಂಡು ಆಶೀರ್ವಾದ ಮಾಡಿದೆ. ಬುದ್ಧಿ ಸರಿಯಾಗಿದ್ದರೆ ಹಾಗೆ ಮಾಡುತ್ತಿದ್ದಳೆ?

ನಾರದ—ರಾಜಪತ್ನಿ. ಹೇಳುವ ಮಾತನ್ನು ಕೇಳಿ. ನಿಮ್ಮ ಕುಮಾರನಿಗೆ ಈ ದಿನಕ್ಕೆ ಆಯುಸ್ಸು ಮುಗಿಯಿತು. ಇಂದು ಮುಗಿಯುವುದೆಂದು ನಿಮ್ಮ ಸೊಸೆಗೆ ತಿಳಿದಿತ್ತು; ತನ್ನ ಸೌಮಂಗಲ್ಯವನ್ನು ಉಳಿಸಿ ಕೊಳ್ಳುವುದಕ್ಕೆ ಹಿರಿಯರ ಆಶೀರ್ವಾದವನ್ನು ಪಡೆದಷ್ಟೂ ಒಳ್ಳೆಯ ದೆಂದು ಹಾಗೆ ಮಾಡಿದಳು. ಅವಳು ಮಾಡಿದ ವ್ರತಗಳೆಲ್ಲಾ ಇದ ಕ್ಕಾಗಿಯೇ. ಈಗಲೂ ಅವಳು ತನ್ನ ರಕ್ಷೆಯನ್ನು ಹಾಕಿ ಈ ದೇಹ ವನ್ನು ಬಿಟ್ಟು ತನ್ನ ನಾಥನ ಜೀವವನ್ನು ತರುವುದಕ್ಕೆಂದು ಧರ್ಮ ದೈವದೊಂದಿಗೆ ಹೋಗಿದಾಳೆ.

ರಾಜಪತ್ನಿ.—ಅಯ್ಯೋ ಹಾಗೆ ಹೋಗುವುದುಂಟೆ. ಆ ದೈವವು ಅವಳನ್ನೂ ಕರೆದುಕೊಂಡು ಹೋದೀತು.

ರಾಜ.—ದೇವೀ ಏನು ಮಾತು ಇದು.

ರಾಜಪತ್ನಿ.—ನನ್ನ ಮಗನನ್ನು ಕೊಂಡುಹೋದ ದೈವವು ಅವಳನ್ನು ಕರೆದು ಕೊಂಡು ಹೋಗುವುದಕ್ಕೆ ಹಿಂಜರಿಯುತ್ತದೆಯೆ. ಅಯ್ಯೊ, ನನ್ನಪ್ಪಾ ನಿನ್ನನ್ನು ನೀಗಿಕೊಂಡೆನೇ, (ಎಂದು ಒಳಗೆ ಹೋಗಿ ಅಳಲುವಳು.)

ಹೋದೆಯಾ ಎನ್ನ ಕಂದ
ಹೋದೆಯಾ ಎನ್ನ ಮಗುವೆ
ಹೋದೆಯಾ ನಿನ್ನ ಬಿಟ್ಟು
ಎಂತು ಬಾಳಲೀ ॥

ಹೋದೆಯಾ ಎನ್ನ ಚಿನ್ನ
ಹೋದೆಯಾ ಎನ್ನ ರನ್ನ
ಹೋದೆಯಾ ಹೊನ್ನಮಗುವ
ನೀಗಿ ಕೊಂಡೆನೇ ॥

ಪಾಪಿಗೆಂತು ಮನವುಬಂತೊ
ರೂಪವಂತನೆಂದು ಬಿಡನೆ
ಪಾಪ ಎನನೆ ಪಾಪಿಯುಮನು
ಕೊಂಡು ಹೋದನೇ ॥

ರಾಜ.—ಹೆತ್ತವಳ ದುಃಖ, ನಾನು ಏನನ್ನು ಹೇಳುವುದು. ನಾನೂ ಈ ಮಗನಲ್ಲಿ ಎಲ್ಲವನ್ನೂ ಕಾಣುವೆನೆಂದಿದ್ದೆ. ರಾಜ್ಯವು ಒಂದಕ್ಕೆ ಬರುವ ಯತ್ನಕ್ಕೆ ಸಮ್ಮತಿಸಿದೆ. ನಾನು ವಾನಪ್ರಸ್ಥದಲ್ಲಿರುತ್ತಾ ಇವನನ್ನು ರಾಜ್ಯಕ್ಕೆ ನಿಲ್ಲಿಸೋಣವೆಂದು ಯೋಚಿಸಿದೆ. ಇದು ದೇವರಿಗೆ ಇಷ್ಟವಿಲ್ಲ. ಮಹರ್ಷಿಗಳೆ ಇದು ನಮ್ಮ ಸೊಸೆಗೆ ಮೊದಲಿಂದ ತಿಳಿದಿತ್ತೆ?

ನಾರದ.—ಹೌದು. ಅದನ್ನು ತಿಳಿದೂ ತಿಳಿದೂ ಅವಳು ಇವನನ್ನು ವರಿಸಿದಳು. ಅವನನ್ನು ಉಳಿಸಿಕೊಳ್ಳುವುದಕ್ಕಾಗಿ ಈ ವ್ರತಗಳನ್ನೆಲ್ಲಾ ಮಾಡಿದಳು.

ರಾಜ.—ನಮಗೆ ಯಾರಿಗಾದರೂ ಸ್ವಲ್ಪವೂ ಸೂಚನೆ ಕೊಡಲಿಲ್ಲ.

ನಾರದ.—ಇದು ಅವಳ ತಂದೆ, ಅವಳು, ನನಗೆ ಮೂವರಿಗೆ ವಿನಾ ಇನ್ನು ಯಾರಿಗೂ ತಿಳಿಯದು. ತಾಯಿಗೆ ಹೇಳಿದರೆ ಆಕೆ ಸಂಬಂಧಕ್ಕೆ ಒಪ್ಪಲಾರರೆಂದು ಅವಳು ತನ್ನ ತಾಯಿಗೂ ಆ ವಿಷಯವನ್ನು ತಿಳಿಸಲಿಲ್ಲ. ನಿಮಗೆ ತಿಳಿಸಿದರೆ ಭಯಪಡುವಿರೆಂದು ನಿಮಗೂ ತಿಳಿಸಲಿಲ್ಲ.

ರಾಜ.—ಆಹಾ. ಅವಳು ವೀರರಮಣಿ. ಆದರೆ ನಾವು ಭಯಪಡದೆ ಇರಲೆಂದು ತಾನು ಮಾತ್ರ ಬಹಳ ಕಷ್ಟಪಟ್ಟಳು.

(ಕಂದ)

ಕ್ಷಯುಪಕ್ರಿಮಿ ತನುವೋಳಿರಲ್
ನಯನದಿನುಡಿಗಳಲಿ ಧೈರ್ಯವುಂ ತೋರುವರೊಲ್
ಭಯವಿಂತಿದ ತನ್ನೊಳಿಯ ಹೃ
ದಯದೊಳೆ ಮರೆಯಿಸುತೆ ಕುವರಿತಾಂ ಕರಗಿದಳೇ ॥

(ಎಂದು ಸತ್ಯವಾನನ ದೇಹದ ಬಳಿಗೆ ಹೋಗುವರು.)

(ರಂಗದ ಹಿಂದುಗಡೆ ಧರ್ಮನೂ ಸಾವಿತ್ರಿಯೂ ಬರುವರು.)

ಧರ್ಮ.—ಅಮ್ಮಾ, ನೀನು ಮತ್ತೆ ನನ್ನ ಹಿಂದೆ ಬರುತ್ತಿರುವೆಯಲ್ಲ.

ಸಾವಿತ್ರಿ.—ತಂದೆಯೇ ನನಗೆ ಹಿಂದಕ್ಕೆ ಹೋಗಲು ಮನಸ್ಸು ಬರುವುದಿಲ್ಲ.

ಧರ್ಮ.—ನೀನು ನನ್ನ ಜೊತೆಗೆ ಬರಲಾರೆ. ವೃಥಾ ಆಯಾಸ ಪಡುವೆ.

ಸಾವಿತ್ರಿ.—ಪತ್ನಿಗೆ ಪತಿಯ ಜೀವ ಇರುವ ಕಡೆ ಇದ್ದರೆ ಆಯಾಸ ಎಂದಿಗೂ ಆಗದು. ಅಲ್ಲದೆ ನನಗೆ ನಿನ್ನ ಜೊತೆಯಲ್ಲಿರುವುದರಿಂದ ಪ್ರಯೋಜನ ಉಂಟು.

ಧರ್ಮ.—ಅದೇನು ತಾಯಿ?

ಸಾವಿತ್ರಿ.— (ವೃತ್ತ)

ಅರಿದವರೆನ್ನರೇ ಜಗದೊಳಾವನು ಸಂತರಸಂಗಕಾಶಿಸು
ತ್ತರಸುತಲಂತರೊಳ್ನಿಲುವನಂತವಗೊಂದರೆಯಾವುಮಾತ್ರದೊಳ್
ಬರುವುದು ಕಾಲಮುಂ ಕಲಿತಪಾಠದಿಬಾರದಸಾರವದ್ಗುಣಂ
ಅರಿವರೆ ಸಾಟಿಯಾಗದಲೆ ಸಜ್ಜನಮೈತ್ರಿಯೊಳಿನ್ನದಾವುದುಂ ॥

ನಿನ್ನಂಥ ಮಹಾತ್ಮರ ಸಂದರ್ಶನವೇ ನಮ್ಮಂಥವರಿಗೆ ದುರ್ಲಭ. ಅದರಲ್ಲಿಯೂ ನೀನು ನನ್ನನ್ನು ಬಹಳ ವಿಶ್ವಾಸದಿಂದ ಸಂರಕ್ಷಿಸುತ್ತಿದ್ದೀಯೆ. ಅಲ್ಲದೆ ಹಿರಿಯರು ಹೇಳುವಂತೆ ಯಾರ ಜೊತೆಗೆ ನಾವು ಏಳಡಿಯನ್ನು ಇಟ್ಟು ನಡೆಯುವೆವೋ ಅವರನ್ನೆಲ್ಲಾ

ಮಿತ್ರರೆಂದು ಭಾವಿಸಬೇಕು. ಹೀಗೆ ನನ್ನ ಪತಿಯ ಸಾನ್ನಿಧ್ಯ ದಲ್ಲಿರುತ್ತ ಮಹಾತ್ಮನಾದ ನಿನ್ನ ಕೃಪೆಗೆ ಪಾತ್ರಳಾಗಿ ನಿನ್ನೊ ಡನೆ ಪ್ರಯಾಣಮಾಡುವ ಈ ಸುಖವನ್ನು ಪಡೆದಿರುವ ನನಗೆ ಆಯಾಸ ಆಗಲಾರದು. ಆದುದರಿಂದ ನೀನು ನಡೆದರೆ ನಾನೂ ಜೊತೆಯಲ್ಲಿಯೇ ಬರುತ್ತೇನೆ.

ಧರ್ಮ.—ಮಹಿಳಾಮಣಿ, ನಿನ್ನ ಮಾತಿನ ನಯವನ್ನು ಇಷ್ಟೆಂದು ಹೇಳ ಲಾರೆ. ಆದರೆ ನೀನು ನನ್ನೊಡನೆ ಬಂದು ಉಪಯೋಗವಿಲ್ಲ. ಹಿಂದಕ್ಕೆ ನಡೆ.

ಸಾವಿತ್ರಿ.—ನನ್ನ ಪತಿ ಇಲ್ಲಿರುವಲ್ಲಿ ನಾನು ಹಿಂದಕ್ಕೆ ಹೇಗೆ ಹೋಗಲಿ?

ಧರ್ಮ.—ಇನ್ನು ಇವನಿಗೂ ನಿನಗೂ ಸಂಬಂಧವಿಲ್ಲ.

ಸಾವಿತ್ರಿ.—ಅಯ್ಯೋ! ನನಗೆ ಹಾಗೆನ್ನಿಸುವುದಿಲ್ಲ.

ಧರ್ಮ.—ಇನ್ನು ಮೇಲೆ ಹಾಗೆಂದು ಎಂದುಕೊಳ್ಳಬೇಕು.

ಸಾವಿತ್ರಿ.—ಧರ್ಮದೇವ, ನನಗೆ ಈ ಆಜ್ಞೆಯನ್ನು ಮಾಡಬೇಡ.

ಧರ್ಮ.—ನಾನು ನಿನಗೆ ಇನ್ನೇನುಹೇಳಲಿ. ಇದು ದೈವನಿಯಾಮಕ. ಇದರಂತೆ ನಡೆಯಬೇಕು. ಇದನ್ನು ಮೀರಲು ನಮ್ಮ ಯಾರಿಗೂ ಸಾಧ್ಯವಿಲ್ಲ.

ಸಾವಿತ್ರಿ.—ತಂದೆ, ನನಗೆ ದಿನ ಹೇಗೆ ಬರಬೇಕು.

ಧರ್ಮ.—ಇದು ದೇವರು ಮಾಡಿದ್ದೆಂದು ಮನಸ್ಸನ್ನು ಗಟ್ಟಿಮಾಡಿಕೊ.

ಸಾವಿತ್ರಿ.—ನಾನು ಹೋಗಿ ಅತ್ತೆ ಮಾವಂದಿರಿಗೆ ಮುಖವನ್ನು ಹೇಗೆ ತೋರಿಸಲಿ.

ಧರ್ಮ.—ತಾಯಿ, ಏನುಮಾಡುವುದು? ಅವರೂ ಮನಸ್ಸನ್ನು ಗಟ್ಟಿ ಮಾಡಿಕೊಳ್ಳಬೇಕು.

ಸಾವಿತ್ರಿ.—ನನ್ನ ಜೀವವೆಲ್ಲಾ ಇಲ್ಲಿ ಇದೆ. ನಾನು ಹಿಂದಕ್ಕೆ ಹೋಗು ವುದು ಹೇಗೆ? ನಾನು ಬದುಕುವುದು ಹೇಗೆ?

ಧರ್ಮ.—ಅಮ್ಮಾ ಹೀಗೆ ಕ್ಲೇಶಪಡಬೇಡ. ಓಂದಕ್ಕೆ ಹೋಗು ದೇವರ ಸೇವೆ ಯಲ್ಲಿ ಮನಸ್ಸನ್ನಿಡು.

(ಕಂದ)

ಆಸೆಯನುಳಿಮಓಳಾಮಣಿ
ಕ್ಲೇಶಕದೇಮೂಲವೆಂದು ಕೇಳ್ದಿಹೆಯಕ್ಕುಂ
ಪಾಶದ ಬಂಧವ ಕಳೆಯುತೆ
ಈಶನಪದತಳದೆ ಮನವನಿಲಿಸುತೆಬಾಳ್ ॥

ಸಾವಿತ್ರಿ.—ಹಾ ಬಾಳೆ! ಇದಕ್ಕಾಗಿಯೇ ನಾವು ಮದುವೆಯಾಗುವುದು? ಧರ್ಮದೇವ, ಅಲ್ಲದೆ ಇನ್ನೊಂದು ಮಾತುಂಟು. ನಾನು ಅರಿಯು ದವಳು. ನನ್ನ ಮಾತು ಹೆಚ್ಚಾದರೆ ಮನ್ನಿಸಬೇಕು. ಹಿರಿ ಯರು ಹೇಳಿದಾಗ ಕೇಳಿದ ಮಾತನ್ನು ನಿನ್ನಲ್ಲಿ ವಿಜ್ಞಾಪನೆಮಾಡಿ ಕೊಳ್ಳುತ್ತೇನೆ.

ಧರ್ಮ.—ಹೇಳು.

ಸಾವಿತ್ರಿ.— (ವೃತ್ತ)

ಆಶಾಪಾಶವಿಮೋಚನಂ ಸುಖಗಳೊಳ್ದೇಹಾಂತಮುಂತತ್ತ್ವವಂ
ಪಾಶಂಬೊಲ್ ಧರಿಸಿರ್ಪರೊಳ್ಸಲುವುದಿನ್ನುಂಸೌಖ್ಯಮೊಂದಾನುಮುಂ
ಈಷನ್ಮಾತ್ರವಕಾಣದರ್ಗದರಬಂಧಂಬರ್ಪುದೇ ಜ್ಞಾನಿಗಳ್
ಈಶಾಂಘ್ರಿದ್ವಯಕೊಯ್ವಮಾರ್ಗಗಳೊಳಾಶಾಮಾರ್ಗಮೊಂದೆನ್ನರೇ ॥

ಕೆಲವರಿಗೆ ಪ್ರವೃತ್ತಿಮಾರ್ಗವೂ, ಕೆಲವರಿಗೆ ನಿವೃತ್ತಿಮಾರ್ಗವೂ ಸರಿಯೆಂದೂ ಎರಡರಿಂದಲೂ ಪರಮಾತ್ಮನನ್ನು ಸೇರಬಹುದೆಂದೂ ಹೇಳುವರು. ನಾನೂ ನನ್ನ ಪತಿಯೂ ಕಾರ್ಯಪ್ರಪಂಚದಲ್ಲಿದ್ದು ಧರ್ಮವನ್ನು ಸಂಪಾದಿಸಬೇಕೆಂದು ಇದ್ದೆವು. ಇಷ್ಟರಲ್ಲಿ ನೀನು ಅವನನ್ನು ಕರೆದೊಯ್ದು ನನಗೆ ಆಶೆಯನ್ನು ಬಿಟ್ಟು ಪರಮಾತ್ಮನನ್ನು ಧ್ಯಾನಮಾಡೆಂದು ಹೇಳಿದರೆ ನನ್ನಂಥ ಅಜ್ಞಳಿಗೆ ಅಬಲೆಗೆ ಅದು ಸಾಧ್ಯವೇ? ನೀನು ನನ್ನ ಮೇಲೆ ಸಂಪೂರ್ಣವಾದ ದಯೆಯನ್ನು

ತೋರಿ ಈ ನನ್ನ ನಾಥನನ್ನು ಕರುಣಿಸಿ ಕೊಟ್ಟರೆ ನಾವಿಬ್ಬರೂ ನಡೆಯಲಾರಂಭಿಸಿದ ಪಥದಲ್ಲಿ ಕೆಲವು ಕಾಲ ನಡೆದು ನಮ್ಮ ನಮ್ಮ ಜನ್ಮಗಳನ್ನು ಸಾರ್ಥಕಗೊಳಿಸಿಕೊಳ್ಳುತ್ತೇವೆ. ಇದನ್ನು ದಯೆ ಪಾಲಿಸು.

ಧರ್ಮ.—ಅಮ್ಮಾ, ನಿನ್ನ ಮಾತಿನ ಚಾತುರ್ಯವನ್ನು ಎಷ್ಟು ಹೇಳಿದರೂ ತೀರದು.

ಸಾವಿತ್ರಿ.—ಧರ್ಮದೇವ, ಅದರಿಂದ ಇನ್ನು ಫಲವೇನು?

(ಕಂದ)

ಪತಿಯಿರೆ ಚತುರತೆ ಎನಿಪುದೆ
ಸತಿಯೊಳು ಪತಿಯುಳಿದರೊಡನೆ ಗುಣವನುಳಿದು ತಾಂ
ಅತಿಬುದ್ಧಿಯೆಂದೆನಿಪ್ಪುದು
ಪತಿಯುಳಿದಿರೆ ಚತುರವಚನದಿಂ ಫಲವೇನ್ನೈ ! ॥

ಸ್ತ್ರೀಯಲ್ಲಿ ಎಲ್ಲವನ್ನೂ ಗುಣವೆನ್ನಿಸುವವನು ಪತಿಯು. ನೀನು ನನ್ನ ಪತಿಯನ್ನು ತೆಗೆದುಕೊಂಡು ಹೋಗುವೆ !

ಧರ್ಮ.—ಅಮ್ಮಾ, ಮತ್ತೆ ಮತ್ತೆ ಹೀಗನ್ನುವೆ. ನಾನಿನ್ನೇನು ಮಾಡಲಿ!

ಸಾವಿತ್ರಿ.—ಧರ್ಮದೇವ, ನಾನು ಕೇವಲ ಅಜ್ಞಳು. ನಾನು ಒಂದು ಮಾತನ್ನು ಕೇಳುತ್ತೇನೆ

ಧರ್ಮ.—ಕೇಳು.

ಸಾವಿತ್ರಿ.—ಧರ್ಮದೇವ. ನೀನು ಧರ್ಮಸ್ವರೂಪನು. ಅಧರ್ಮವನ್ನು ಮಾಡಲಾರೆ.

ಧರ್ಮ.—ಹೇಳಮ್ಮ.

ಸಾವಿತ್ರಿ.—ತಂದೆತಾಯಿಗಳ ಒಬ್ಬನೇ ಮಗನಾಗಿ ಅವರ ಮುಪ್ಪಿಗೆ ಒಂದೇ ದಿಕ್ಕಾದ ಈತನನ್ನು ಕೊಂಡೊಯ್ಯುವುದು ಧರ್ಮದ ಕಾರ್ಯವೆ?

ಧರ್ಮ.—ಅಮ್ಮಾ, ಅದು ನನ್ನ ಧರ್ಮ.

ಸಾವಿತ್ರಿ.—ದೇವ, ಧರ್ಮವು ಬೇರೆಬೇರೆಯುಂಟೇ?

ಧರ್ಮ.—ಅದು ನಾನು ಮಾಡಬೇಕಾದ ಕಾರ್ಯ.

ಸಾವಿತ್ರಿ.—ಅದನ್ನು ಪರಿಶೀಲಿಸಿ ಮಾಡಬಹುದಲ್ಲವೆ?

ಧರ್ಮ.—ಹೇಗೆ? ತಾಯಿ.

ಸಾವಿತ್ರಿ.—ಕಂಡಹಾಗೆ ಅನ್ಯಾಯವೆಂಬುದನ್ನು ಮಾಡಬಹುದೆ?

ಧರ್ಮ.—ನಮ್ಮ ಕರ್ತವ್ಯವಾದುದನ್ನು ಧರ್ಮವೇ ಎಂದು ಪರೀಕ್ಷಿಸುವುದು ನಮಗೆ ಸೇರಿದ್ದಲ್ಲ. ನನ್ನ ಕರ್ತವ್ಯವೆಂದರೆ ಅದೇ ನನ್ನ ಧರ್ಮ.

ಸಾವಿತ್ರಿ.—ದೇವದೇವ, ನಾನು ಕೇಳಿರುವುದರಲ್ಲಿ

(ಕಂದ)

ಧರುಮಂಧರುಮಮೆನಿಕ್ಕುಂ
ತರುವುದುಕೊನೆಗೊಳ್ಳಿ ತಾದ ಫಲವನದೆಂಬಾ
ಭರವಸೆಯಿಂದಮದಾವುದು
ತರದೊಳ್ಳಿ ಪಸದನುಧರ್ಮವೆಂದೆನರರಿದರ್ ॥

ಇದು ಸರಿ ಅಲ್ಲವೇ!

ಧರ್ಮ.—ಅಮ್ಮ, ಇದು ಬರಿಯ ಚರ್ಚೆ. ನಾನು ನನ್ನ ಕೆಲಸವನ್ನು ಮಾಡಬೇಕು. ನೀನು ನಿನ್ನ ಕರ್ತವ್ಯಕ್ಕೆ ಹಿಂದಿರುಗಬೇಕು.

ಸಾವಿತ್ರಿ.—ಧರ್ಮದೇವ, ಕೃಪಾಕರ, ನನಗೆ ಕೃಪೆತೋರು.

ಧರ್ಮ.—ನಿನ್ನ ನಡತೆಗೆ ನಾನು ಮೆಚ್ಚಿದೆನು. ನಿನ್ನ ಪತಿಯ ಜೀವವನ್ನು ಬಿಟ್ಟು ಇನ್ನು ಯಾವುದಾದರೂ ಒಂದು ವರವನ್ನು ಕೇಳು ಕೊಡುವೆನು.

ಸಾವಿತ್ರಿ.—ದೇವದೇವ, ನಾನು ಏನನ್ನೂ ಬೇಡಲಾರೆ.

ಧರ್ಮ.—ಅಮ್ಮಾ, ಮನಸ್ಸಿಗೆ ಸಮಾಧಾನವನ್ನು ತಂದುಕೊ. ಸುಮ್ಮನೆ ದುಃಖ ಪಡಬೇಡ.

ಸಾವಿತ್ರಿ.—ನನ್ನ ಪತಿಯನ್ನು ಕೊಟ್ಟರೆ ನನಗೆ ಯಾವ ದುಃಖವೂ ಇಲ್ಲ. ನಿನಗೆ ನನ್ನಲ್ಲಿ ಕೃಪೆ ಬರಲಿಲ್ಲ.

ಧರ್ಮ.—ಅಮ್ಮಾ, ಕೃಪೆಯಿಲ್ಲದೆ ಇಲ್ಲ. ನಾನೇನು ಮಾಡಲಿ!

ಸಾವಿತ್ರಿ.—ದೇವ, ಕೃಪೆಯಿದೆ ಎನ್ನುವೆ. ಅದು ಇರುವುದು ನನಗೆ ತಿಳಿಯ ಲಿಲ್ಲ. ಕೃಪೆಯಿದ್ದೂ ನನ್ನ ಪತಿಯನ್ನು ತೆಗೆದುಕೊಂಡು ಹೋಗ ಬೇಕಾದುದೇನು?

ಧರ್ಮ.—ಇದು ಕನಿಕರವಿಲ್ಲದ್ದರಿಂದ ಮಾಡುತ್ತಿರುವ ಕೆಲಸವಲ್ಲ. ನಿನಗೆ ಕೆಲವು ದಿನದಲ್ಲಿ ಸಮಾಧಾನ ಬರುವುದು ನಡೆ.

ಸಾವಿತ್ರಿ.—ದೇವ, ಈ ಕನಿಕರವು ವಿಚಿತ್ರವಾದುದು.

(ಕಂದ)

ಹಸಿವಿಂದಳಲುವ ತನ್ನಯ
ಹಸುಳೆಗೆ ತತ್ಸ್ತನವನು ತಿಳಿಸುತದರನ್ನವತಾಂ
ಕಸುಕೊಳ್ವತಾಯನಿನ್ನುಂ
ವಸುಧೆಯ ಜನವರಿಯದಿದನು ದೇವರರಿವರೇ ॥

ಧರ್ಮ.—ಆಹಾ! (ಎಂದು ಮುಂದರಿಯುವನು. ಸಾವಿತ್ರಿಯು ಹಿಂದೆ ಹೋಗು ವಳು. ರಂಗದ ಮುಂದುಗಡೆ ನಾರದನು ಬರುವನು.)

ನಾರದ.— (ವೃತ್ತ)

ಗೋವಳನೆತ್ತಿ ವತ್ಸವನದೆಂತುಟು ಮುಂಗಡೆ ಪೋಪನಂತೆಯೇ
ಗೋವದುಸಾರಿ ತನ್ನೆಳೆಯದಂ ಭಯವಿಹ್ವಲಮಾದ ನೋಟದಿಂ
ತೀವಿದನೇಹದಿಂ ಪರಿಕಿಸುತ್ತೆಯೆ ಪೋಪವೊಲೀಕೆ ಸಾರ್ದಪಳ್
ಕಾವುದು ಸಾಧ್ವಿಯಂ ಕರುಣೆಯಿಂ ಕರುಣಾಕರ ಲೋಕಪಾಲಕಾ ॥

ಎಂತ ನಿಷ್ಠೂರವಾದ ಮಾತನ್ನಾಡಿದಳು. ಕಂದ, ನೀನೇನು ಮಾಡುವೆ. ನಿನ್ನ ದುಃಖವು ಆಡಿಸಿತು.

(ರಾಜನೂ ಬರುವನು.)

ರಾಜ.—ಏನಾಗುತ್ತಿದೆ ಎಂದು ತಿಳಿದು ಹೇಳಬೇಕು.

ನಾರದ.—ಧರ್ಮದೇವನು ತಪ್ಪಿಸಿಕೊಳ್ಳಲು ನೋಡುತ್ತಿದ್ದಾನೆ. ಸಾವಿತ್ರೀದೇವಿಯು ಬಿಡದೆ ಇದ್ದಾಳೆ. ಹೇಳುವಷ್ಟನ್ನು ಹೇಳಿದನು. ಅವಳು ಸಮಾಧಾನಳಾಗಿಲ್ಲ. ಕೊನೆಗೆ ಅವಳು ಹೇಳಿದ ಒಂದು ಮಾತಿಗೆ ಉತ್ತರವನ್ನು ಹೇಳಲಾರದೆ ಮುಂದಕ್ಕೆ ಹೋಗುತ್ತಿದ್ದಾನೆ.

ರಾಜ.—ಇದರ ಪರಿಣಾಮ ಹೇಗೆ?

ನಾರದ.—ಪರಮಾತ್ಮನು ಬಲ್ಲ.

ರಾಜ.—ಇದು ಯಾರೋ ಬರುತ್ತಿರುವಂತಿದೆ. ಮಾತನಾಡುತ್ತಿರುವರು.

ನಾರದ.—ಸಾವಿತ್ರೀದೇವಿ ಬಂದುಬಿಟ್ಟಳೊ? (ಎಂದು ನೋಡಿ) ಅಶ್ವಪತಿ ರಾಜನೂ ಮಾಳವೀದೇವಿಯೂ ಬರುತ್ತಿದಾರೆ.

ರಾಜ.—ಬಹು ದುಃಖದ ದಿನಕ್ಕೆ ಬಂದರು.

(ಅಶ್ವಪತಿಯೂ ಮಾಳವಿಯೂ ಬರುವರು.)

ಮಾಳವಿ.—ನನಗೆ ಮೊದಲೇ ಹೇಳಿದ್ದರೆ ನನ್ನ ಮಗು ಸುಮಂಗಲಿಯಾಗಿರುವಾಗ ಬಂದು ನೋಡುತ್ತಿದ್ದೆ. ನೀವು ಹೀಗೆ ಮಾಡಿದಿರಲ್ಲಾ.

ಅಶ್ವಪತಿ.—ಅವಳು ಹಠದ ಹುಡುಗಿ. ಅವಳ ಇಷ್ಟದಂತೆ ನಡೆಯಬೇಕಾಯಿತು ಇದಕ್ಕೆ ಚಿಂತಿಸಿ ಫಲವೇನು? (ನಾರದನನ್ನು ನೋಡಿ) ಮಹರ್ಷಿಗಳಿಗೆ ವಂದನೆ. ದ್ಯುಮತ್ಸೇನ ರಾಜರ್ಷಿಗಳಿಗೆ ವಂದನೆ.

ರಾಜ.—ಬಹಳ ಕಷ್ಟದ ದಿನಕ್ಕೆ ಬಂದಿರಿ.

ಅಶ್ವಪತಿ.—ನಿನ್ನೆ ಸೇರಬೇಕಾಗಿತ್ತು. ದಾರಿಯಲ್ಲಿ ಒಂದುದಿನ ಸಾವಕಾಶವಾಯಿತು.

ರಾಜಪತ್ನಿ.—(ಈಚೆಗೆ ಬಂದು) ಮಾಳವೀದೇವಿ, ಏನೋ ಆಗಿಹೋಯಿತಮ್ಮಾ (ಎಂದು ಆಕೆಯನ್ನು ಒಳಗೆ ಕರೆದುಕೊಂಡು ಹೋಗುವಳು.)

ರಾಜ.—ನಿಮಗೆ ನಿರಂತರವಾದ ಶೋಕವುಂಟಾಯಿತು.

ಅಶ್ವಪತಿ.—ತಮ್ಮ ಶೋಕಕ್ಕಿಂತಲೆ? ಆದರೆ ನಾವು ಯಾರು ಯಾರಿಗೂ ಈಗ ಸಮಾಧಾನ ಹೇಳುವಂತಿಲ್ಲ.

ರಾಜ.—ನಿಮ್ಮ ಕುಮಾರಿಗೆ ದೇವರು ಅನ್ಯಾಯ ಮಾಡಿದನು. ಜೇಡರ ಹುಳು ಕಟ್ಟಿದ ಗೂಡನ್ನು ಹುಡುಗರು ಕಿತ್ತುಹಾಕುವ ಹಾಗೆ ಆ ಜೀವನವೇ ಕೆಟ್ಟುಹೋಯಿತು.

ಅಶ್ವಪತಿ.—ನಮಗೆ ಕಷ್ಟ ನಿಜ. ಆದರೆ ಪರಮಾತ್ಮನ ಇಚ್ಛೆಯನ್ನು ನಾವು ಕಾಣೆವು. ನೆರೆಹೊರೆಯ ಮಕ್ಕಳು ಸೇರಿ ಮದುವೆ ಮನೆ ಮಠ ಎಂದು ಆಡುತ್ತಿರುವಾಗ ತಾಯಿಬಂದು ಮಗನನ್ನು ಕರೆದುಕೊಂಡು ಹೋದ ಹಾಗೆ, ತನ್ನ ವಸ್ತುವನ್ನು ಪರಮಾತ್ಮನು ಕೊಂಡುಹೋದನು. ನಮ್ಮ ಆಟ ಕೆಟ್ಟು ನಾವು ದುಃಖಪಡುವೆವು.

ರಾಜ.—ತಾವು ಪ್ರಾಜ್ಞರು.

ಅಶ್ವಪತಿ.—ನನ್ನ ದುಃಖ ತಮ್ಮ ದುಃಖಕ್ಕಿಂತ ಕಡಿಮೆ. ಆದ್ದರಿಂದ ನಾನು ಪ್ರಾಜ್ಞನಂತೆ ಮಾತನಾಡುತ್ತೇನೆ. ಋಷಿವರ್ಯ. ಏನಾಗಿದೆ ಹೇಳಬೇಕು.

ನಾರದ.—ಅಲ್ಲಿ ನಡೆಯಿರಿ. ಎಲ್ಲವೂ ತಿಳಿಯುವುದು (ಅವರು ಇಬ್ಬರೂ ಒಳಗೆ ಹೋಗುವರು) ಶ್ರೀಹರಿ, ತಿಳಿಯದ ಬಾಲೆ ದುಃಖದಲ್ಲಿ ಹೇಳಿದಮಾತಿಗೆ ಕೋಪಿಸಬೇಡ. (ಭಜನೆ ಮಾಡುವನು.)

(ರಾಗ ಕಾನಡ.)

ಕೋಪಿಸಬೇಡಾ ಹರಿಯೇ ಪರಿ-
ತಾಪದಿ ಬಾಲೆಯು ಆಡಿದ ನುಡಿಗೆ॥

ಅರಿಯದ ಬಾಲೆ ದುರಂತದುಃಖದಿ
ಅರಿವಳೆ ನಿನ್ನ ನಿಗೂಢ ವರ್ತನವ
ಕರುಣಾಕರ ನೀನಿಂತಿದ ನೋಡಿ
ಮರೆವುದು ಬಾಲೆಯ ಕ್ರೂರದ ನುಡಿಯ ॥

ನಿನ್ನನು ದೂಷಿಸಿ ಆಡಿದಮಾತಿದು
ಎನ್ನದೆ ದುಃಖದ ಚಿಹ್ನೆಯಿದೆನ್ನುತೆ
ನಿನ್ನ ಕಂದನೆಂದೆಣಿಸುತೆ ಇವಳನು
ಮನ್ನಿಸಿ ಪೊರೆ ಕರುಣಾಕರ ಶ್ರೀಶಾ ॥

(ಎಂದು ಒಳಗ ಹೋಗುವನು.)

(ರಂಗದ ಹಿಂದುಗಡೆ ಧರ್ಮನೂ ಸಾವಿತ್ರಿಯೂ ಬರುವರು.)

ಧರ್ಮ.— (ಕಂದ)

ಎನಿತಂ ಸಾರಲಿ ಬಹುದೋ
ಅನಿತುಂ ದೂರವನು ಸಾರಿ ಬಂದಿಹೆಯಲೆ ನೀಂ
ಜನನಕೆ ಮರಣಂ ಸಹಜಂ
ವನಿತೆಯೆ ನೀನಿನ್ನು ಮರಳಿ ಪೋಪುದಿದುಚಿತಂ ॥

(ಎಂದು ಮುಂದಕ್ಕೆ ಹೋಗಿ ಇನ್ನೊಂದು ಭಾಗದಲ್ಲಿ ರಂಗಕ್ಕೆ ಬರುವನು.)
(ಸಾವಿತ್ರಿಯೂ ಹಿಂದೆ ಬರುವಳು.)

ಇನ್ನೇನು ?

ಸಾವಿತ್ರಿ.—ತಂದೆ. ನಿಮಗೆ ನನ್ನ ವಿಷಯದಲ್ಲಿ ಆಗ್ರಹವಿಲ್ಲವಷ್ಟೆ.

ಧರ್ಮ.—ಆಗ್ರಹವೇಕೆ ?

ಸಾವಿತ್ರಿ.—ಮೊದಲು ಅಮ್ಮಾ ತಾಯಿ ಎಂದು ಕರೆಯುತ್ತಿದ್ದ ಈಗ ವನಿತೆಯೆಂದು ಕರೆಯುವಿರಲ್ಲ.

ಧರ್ಮ.—ಇಲ್ಲ ತಾಯಿ. ಆಗ್ರಹವೇನೂ ಇಲ್ಲ. ಆದರೆ ನೀನು ಹಿಂತಿರುಗಬೇಕು.

(ಕಂದ)

ಮಾರಿದೆಯಾ ದೇಹಿ ಜೀವ
ಸಾರಲಿ ಬಹುದಾದ ಸೀಮೆಯುಂ ನೆಲೆಯಿವರೊಳ್
ಸೇರುವರಳಿದರ್ ಮಾತ್ರಂ
ಬಾರದಿರಿನ್ನಿನಿಸುದೂರಮಂ ನೀಂ ಕುವರೀ ॥

ಸಾವಿತ್ರಿ—ಹಾಗೆ ಕರೆಯಿರಿ ತಂದೆ. ನನ್ನ ಕಠಿಣವಾದ ಮಾತಿಗೆ ಕೋಪಗೊಂಡಿರೋ ಎಂದು ಭಯವಾಯಿತು. ನನ್ನ ತಪ್ಪನ್ನು ಮನ್ನಿಸಿ.

ಧರ್ಮ—ಮನ್ನಿಸಿವೇನೆ. ಇನ್ನು ನಡೆ.

ಸಾವಿತ್ರಿ—ದೇವ ನನ್ನಲ್ಲಿ ಕೃಪೆಯನ್ನು ತೋರಿ.

ಧರ್ಮ—ನೀನು ಬೇಡುವುದನ್ನು ಕೊಡುವುದು ಸಾಧ್ಯವಲ್ಲ. ಅದು ಧರ್ಮಕ್ಕೆ ವಿರೋಧ.

ಸಾವಿತ್ರಿ—ಕರುಣೆಯು ಧರ್ಮಕ್ಕೆ ವಿರೋಧ ಹೇಗಾದೀತು ?

(ವೃತ್ತ)

ಮಾರದೆ ಧರ್ಮದೊಳ್ನಡೆ ಪರೊಳ್ನಡಹಾದವರ್ಮೌಕ್ತಿಕದೊಂದುಶೋಭೆಯಿಂ
ಸೇರಿಸೆ ಕಂಠದೊಳ್ಕರಿಸಲೊಪ್ಪುವ ಭೂಷಣಮಪ್ಪುದು ಸಾಜಮಾದೊಡಂ
ಸೇರಿಸುತೆಲ್ಲವಂ ಪೋರಕೆ ತೋರದೆ ಮುಗ್ಧದೆ ಸಾರುವ ನಂದ ಹೊನ್ನಿನಾ
ದಾರದ ನೋಲು ತಾಂ ಧರುಮಕೆಂದೆನರೇ ಕೃಪೆಎನ್ನಿಪುದಾರಸೂತ್ರಮಂ ॥

ಧರ್ಮ—

(ಕಂದ)

ಆರಿದ ಬಾಯಿಗೆ ನೀಯ್ತಿಳಿ
ನೀರೆಂತಂತೆನಗೆ ಸುಖವನೀಡುವನುಡಿಯಂ
ಓರ್ದೊರ್ಮೆಯು ಪೇಳುವೆಯಾ
ಸಾರಂಗಡ ನಿನ್ನ ವಿಮಲವಾಕ್ಚಾತುರ್ಯಂ ॥

ಆದರೆ ನಿನ್ನ ಪತಿಯನ್ನು ಬಿಟ್ಟು ಕೊಡುವುದೆಂಬ ಇದು ನನ್ನಿಂದ ಸಾಧ್ಯವಿಲ್ಲ. ಇನ್ನೇನಾದರೂ ಕೇಳು. ಕೊಡುವೆನು.

ಸಾವಿತ್ರಿ —ಇನ್ನೇನನ್ನು ಕೇಳಲಿ. ನಮ್ಮ ತಂದೆಗೆ ಗಂಡುಮಕ್ಕಳು ಇಲ್ಲ ಅವನಿಗೆ ಗಂಡುಮಕ್ಕಳು ಆಗಿ ವೀರರಾಗಿ ವಂಶಕ್ಕೆ ಕೀರ್ತಿತರಲೆಂದು ಪ್ರಾರ್ಥಿಸುತ್ತೇನೆ.

ಧರ್ಮ.—ಆಗಲಿ. ಇನ್ನು ನೀನು ಹೋಗು.

(ಎಂದು ಮುಂದೆ ಹೋಗುವನು. ಹಿಂದೆಯೇ ಸಾವಿತ್ರಿ ಹೋಗುವಳು.)

(ನಾರದಮಹರ್ಷಿಯು ಬರುವನು.)

ನಾರದ.— (ವೃತ್ತ)

ದಾಹಕ್ಲೇಶದೆ ದೂರದೊಳ್ತೊಳಯನೀರಂ ಜೀವನಿಂ ಸೇರುತಂ
ದೇಹಂಪಿಂದೆತೊಳಲ್ದು ಪ್ರೊಲ್ ತೊಳಲಿತಾಂ ನಿರ್ಪಿನ್ನು ಪೇಸಾರುತಂ
ಸ್ನೇಹಂತೀವಿದ ಜೀವನಂ ಪತಿಯ ಮುಂಪೋಪಾತ್ರಸೊಳ್ಕೆತ್ತಿಹಳ್
ಪಾಪಿ ಪ್ರೀತ ಸಹಾಯಶೂನ್ಯತೆಯೊಳ್ ಸಾಧ್ವೀಶಿರೋರತ್ನಮಂ ॥

(ಎಂದು ಪ್ರಾರ್ಥಿಸುತ್ತಾ ಮರೆಯಾಗುವನು.)

(ಧರ್ಮನೂ ಸಾವಿತ್ರಿಯೂ ಮತ್ತೆ ಬರುವರು.)

ಸಾವಿತ್ರಿ.—ದೇವ.

ಧರ್ಮ.—ತಾಯಿ. ನೀನು ಸುಮ್ಮನೆ ತೊಂದರೆ ಪಡಬೇಡ.

ಸಾವಿತ್ರಿ.—ಅಯ್ಯೋ, ನಾನೇನು ಮಾಡಲಿ.

ಧರ್ಮ.—ಅಮ್ಮಾ ಸುಮ್ಮನೆ ದುಃಖಪಡಬೇಡ.

ಸಾವಿತ್ರಿ.—ನನಗೆ ದಿಕ್ಕಿಲ್ಲದೆ ಹೋಗುವುದಲ್ಲ.

ಧರ್ಮ.—ನಿಮ್ಮ ತಂದೆತಾಯಿಯರ ಬಳಿಗೆ ಹೋಗು.

ಸಾವಿತ್ರಿ.—ಮತ್ತೆ ಬರುವುದಕ್ಕೆ ಕಳುಹಿಸಿದೆವೇ ಎಂದು ಅವರು ಕೇಳಿದರೆ ಏನು ಹೇಳಲಿ ?

ಧರ್ಮ.—ಆಹಾ !

ಸಾವಿತ್ರಿ.—ದೇವ. ನಿಮ್ಮನ್ನು ನಾನು ಸುಮ್ಮನೆ ತೊಂದರೆ ಪಡಿಸಿದೆ. ಇದುವರೆಗೆ ತೋರಲಿಲ್ಲ. ಈಗ ಒಂದು ಯೋಚನೆ ತೋರುತ್ತದೆ. ಅದನ್ನಾದರೂ ನಡೆಯಿಸಿಕೊಡಿ.

ಧರ್ಮ.—ನೀನು ಇನ್ನು ಏನನ್ನೂ ಕೇಳಬೇಡ.

ಸಾವಿತ್ರಿ.—ಇಲ್ಲ. ನೀವು ಈ ಕೆಲಸಕ್ಕಾಗಿ ಬಂದವರು ಬರಿಯಕೈಯಲ್ಲಿ ಹೋಗಲಾಗದು. ಅದರಿಂದಲೇ ಇಷ್ಟು ಯತ್ನದಿಂದ ಈ ಜೀವವನ್ನು ತೆಗೆದುಕೊಂಡು ಹೋಗುತ್ತಿರುವಿರಿ. ಆದರೆ ದೇವ.

(ವೃತ್ತ)

ಕೊಳಲೇಬೇಕೆನಲೇದಿನಂ ಹರಣಮೊಂದಂ ತಂದೆ ನಾಂ ಬೇಡುವಂ
ಕೊಳುನೀನೆನ್ನಯ ಜೀವಮಂ ಬಿಡುವುದೆನ್ನಾತ್ಮೇಶನೀ ಪ್ರಾಣಮುಂ
ಎಳದೀಜೀವನುಮಂತೆ ನಾನರಿದವೋಲ್ ತಾಂ ನಿರ್ಮಲಂ ನಿಕ್ಕುವಂ
ಉಳಿದಂತಾತನವೋಲದಂತರ್ಧವ ದೇವಾ ಮನ್ನಿ ಸೌದಾರ್ಯದಿಂ ॥

ಆತನನ್ನು ಬಿಟ್ಟುಕೊಟ್ಟರೆ ಆತನ ಮಾತಾಪಿತೃಗಳನ್ನು ಸಂರಕ್ಷಿಸುವೆನು.

ಧರ್ಮ.—ಇದು ನನ್ನಿಂದ ಸಾಧ್ಯವಲ್ಲ. ನೀನು ಹೊರಡು.

ಸಾವಿತ್ರಿ.—ಹೋಗಿ ಏನು ಮಾಡುವುದೋ ತೋರಲಿಲ್ಲ.

ಧರ್ಮ.—ಪ್ರತಿಯೊಬ್ಬರಿಗೂ ನಿಯಮಿತವಾದ ಒಂದು ಧರ್ಮವಿರುವುದು.

ಸಾವಿತ್ರಿ.—ತಂದೆಯೆ, ಮನ್ನಿಸು.

(ಕಂದ)

ಸಾರುವೆನಾಂ ಪತಿಸಾರ್ದೆಡೆ
ತೋರದು ಮನಕಿನ್ನದಾವಧರ್ಮವುಮರಿದರ್
ವಾರಂಸಾರ್ವರು ಸತಿಯೊಳು
ಸಾರಗುಣಂ ಪತಿಯನುಳಿಯದಿರ್ಪುದೆ ಎನುತಂ ॥

ಧರ್ಮ.—ಅಮ್ಮಾ, ನೀನು ಹೇಳುವುದು ನಿಜ. ಆದರೆ ಅದಕ್ಕೆ ಒಂದು ಎಲ್ಲೆಯುಂಟು. ಇದುವರೆಗೆ ಬಂದವ್ರರಲ್ಲೇ ನೀನು ಎಲ್ಲರಿಗಿಂತ

ಲೂ ದೂರ ನಡೆದು ಬಂದಿದ್ದೀಯೆ. ಇನ್ನು ನಿನ್ನ ಕರ್ತವ್ಯವು ಮುಗಿಯಿತು. ನಿನ್ನ ವಿಷಯದಲ್ಲಿ ನನಗೆ ಬಹಳ ಗೌರವ ಉಂಟಾಗಿದೆ. ಅದಕ್ಕೆ ಚಿಹ್ನೆಯಾಗಿ ಒಂದು ವರವನ್ನು ಬಿಟ್ಟು ಇನ್ನು ಯಾವ ವರವನ್ನಾದರೂ ಕೇಳು. ಕೊಡುತ್ತೇನೆ.

(ವೃತ್ತ)

ಉಳಿಯುತೆ ಸತ್ಯವಾನನಸುವಂ ಬಳಿಕಿನ್ನವನಾವುದಾವೊಡಂ
ಎಳಸುವೆಯಾಗೆ ನೀಂ ಕುವರಿ ಸಂತಸದಿಂದದನೀಡಲೊಪ್ಪುವೆಂ
ಅಳಲಲಿಬೇಡ ನಾಂಕೊಳುವೆನೆನ್ನುತೆ ನಿನ್ನಯಪ್ರಾಣನಾಥನಂ
ನೆಲೆಯಲಿಸಾವು ಜಾಣೆ ಜಗದೊಳ್ತನುವಂತಳೆದಲ್ಲಜೀವಕಂ ॥

ಸಾವಿತ್ರಿ.—ಹಾ ದೇವ. ಯಾವ ವರವನ್ನು ಬೇಡಲಿ.

(ವೃತ್ತ)

ಧರ್ಮದೈವವೆ ಆಣ್ಮನಂ ಬಿಡುತಿನ್ನದಾವುದನಾಶಿಪೆಂ
ಕರ್ಮವಂತಿರಲೆನ್ನದೇಹದೆ ಪುತ್ರರಂ ಪೆರಲೀತನಾ
ದೊರ್ಮಜೀವದೊಳಾಸೆಯಿರ್ದುದು ದೇವದೇವ ಕೃಪಾಕರಾ
ಧರ್ಮದೇವನೆ ಜೀವದಾಶೆಯಿದೊಂದನೀಡುತೆ ಪಾಲಿಸೈ ॥

ಧರ್ಮ.—ಆಗಲಿ. ಹೋಗು, ತಾಯಿ. ಇನ್ನು ನಡೆ.

ಸಾವಿತ್ರಿ.—ದೇವ.

ಧರ್ಮ.—ಮತ್ತೇನಮ್ಮಾ?

ಸಾವಿತ್ರಿ.—ಈ ವರವು ನಡೆಯಬೇಕಾದರೆ ನೀನು ನನ್ನ ನಾಥನನ್ನು ಬಿಟ್ಟು ಕೊಡಬೇಕು.

(ವೃತ್ತ)

ಧರ್ಮದೇವನೆ ಎನ್ನನಾಥನ ಜೀವನಂಕೊಳುತೀತನಂ
ಕರ್ಮದೇಹದಿ ನೀಗಿಸಲ್ಕವನೆಂತು ಪುತ್ರರಪೊಂದುವಂ
ನಿರ್ಮಲಾತ್ಮನೆ ನೀನಿದೆಲ್ಲವ ನೋಡಿ ಬೀಳ್ಕೊಡುತೀತನಂ
ಕೂರ್ಮೆಯಿಂದಲಿ ಪುತ್ರಿಯೆಂದೆಣಿಸುತ್ತಲೆನ್ನನು ಪಾಲಿಸೈ ॥

ಧರ್ಮ.—(ಸ್ವಲ್ಪ ಯೋಚಿಸಿ) ಆಗಲಿ ಹೋಗು.

ಸಾವಿತ್ರಿ.—ದೇವ ದೇವ, ಕೃಪಾಕರ (ಎಂದು ಕಾಲಿಗೆ ಬೀಳುವಳು.)

(ಪರದೆ ಬೀಳುವುದು.)

(ಮತ್ತೆ ಪರದೆ ಏಳುವ ವೇಳೆಗೆ ಮೊದಲು ಕಳೇಬರ ನಿಂತಸ್ಥಳ. ರಾಜನೂ, ಪತ್ನಿಯೂ, ಮಹರ್ಷಿ, ಅಶ್ವಪತಿ, ಮಾಳವೀದೇವಿ ಇವರೂ ಇರುವರು. ಸತ್ಯವಾನನ ದೇಹ ಇರುವುದು.)

ನಾರದ.—(ಗಾನಮಾಡುವನು.)

(ರಾಗ ದೇವಗಾಂಧಾರಿ.)

ಏತರಭಯವಿದು ಶ್ರೀಹರಿಯಿರಲು
ಕಾತರನಾಗುವೆ ಏತಕೆ ಮರುಳೆ ॥

ಕರಿಬಲಿಧ್ರುವರನು ಪೊರೆದುದಕಾಣೆಯ
ಅರಿಯೆಯ ಪ್ರಹ್ಲಾದನನವಪೊರೆದುದ
ಮರೆವನೆ ಭಕ್ತರ ಪೊರೆಯುವಕಾರ್ಯವ
ಅರಿದಿರಲಿದನಿನ್ನೇತರ ಭಯವೈ ॥

ಲೋಕವನೆಲ್ಲವ ರಕ್ಷಿಪುದೆಂಬ
ಏಕಕಾರ್ಯವಲಿ ನಿಂದಿಹನವನು
ನೂಕೈ ಭಯಗಳನೆಲ್ಲವ ದೂರಕೆ
ಹಾಕೈ ಭಾರವನೆಲ್ಲವನವನೊಳು ॥

ದಯೆಯಿಂತೀವಿದ ಕುವಲಯದಂದದ
ನಯನಗಳಿಂದವಲೋಕಿಸುತಿಹನು
ಭಯವನು ಬಿಡಿ ಧೈರ್ಯದೋಳಿರಿ ಎಂದು ಅ-
ಭಯವನು ನೀಡುತಲಿರುವನು ನೋಡು ॥

ರಾಜ.—ಮಹರ್ಷಿಗಳೆ. ಏನಾಗಿದೆ? ಇದೇನು. ನನಗೆ ನೀವೆಲ್ಲಾ ಕಾಣು ವಿರಿ. ನನ್ನ ದೃಷ್ಟಿಯು ಮತ್ತೆ ಬಂದಿದೆ!

ಅಶ್ವಪತಿ.— (ಕಂದ)

ತಂಪಾದೆಲರಿದು ಪೂಗಳ
ಕಂಪಿಂ ಸೊಗಯಿಸುತೆ ತೆಂಕಣಿಂ ಬರುತಿರ್ಕುಂ
ಇಂಪಾದ ಗಿಳಿಗಳುಲಿವಿನ
ಸೊಂಪಲಿ ಪೊಂಬೆಳಗ ಬಾಂದಳಂ ಶೋಭಿಸುಗುಂ ॥

ಋಷಿವರ್ಯ ಇದು ಶುಭವನ್ನು ಸೂಚಿಸುತ್ತಿದೆಯಲ್ಲವೆ?

ನಾರದ.—ಹೌದು. (ಎಂದು ಸತ್ಯವಾನನನ್ನು ನೋಡುವನು.)

ರಾಜ.—ಧರ್ಮದೇವನು ಬಿಟ್ಟನೇ?

ನಾರದ.—ಬಿಟ್ಟನು.

ರಾಜಪತ್ನಿ.—ನನ್ನಮ್ಮಾ. ನನ್ನ ತಾಯಿ......(ಎಂದು ಮಗನ ಹತ್ತಿರಕ್ಕೆ ಹೋಗಿ ನೋಡುವಳು.)

ಸತ್ಯವಾನ.—(ಉಸಿರನ್ನು ಎಳೆದು ದೀರ್ಘನಿಶ್ವಾಸವನ್ನು ಬಿಟ್ಟು ಮತ್ತೆ ಉಸಿರನ್ನು ತೆಗೆದುಕೊಂಡು ಕಣ್ಣುಬಿಟ್ಟು) ದೇವೀ. (ಎಂದು ತಾಯನ್ನು ನೋಡಿ.) ಅಮ್ಮಾ ನೀನು ಯಾವಾಗ ಬಂದೆ?....ನಿನ್ನ ಸೊಸೆ ಎಲ್ಲಿ? (ಎಂದು ಎದ್ದು ಕುಳಿತು) ಇದೇನು ಎಲ್ಲರೂ ಬಂದಿದೀರಿ! ಪೂಜ್ಯರಿಗೆ ವಂದನೆ.

ರಾಜಪತ್ನಿ.—ನನ್ನಯ್ಯಾ. ಬದುಕಿ ಬಂದೆಯಾ. (ಎಲ್ಲರೂ ಸಂತೋಷದಿಂದ ಕಣ್ಣೀರನ್ನು ಬಿಡುತ್ತಿರುವರು.)

ಸತ್ಯವಾನ.—ಏಕೆ, ಏನಾಗಿತ್ತು?

ರಾಜಪತ್ನಿ.—ನಿನಗೆ ಮೈಯಲ್ಲಿ ಲಘುವಾಗಿದೆಯೋ?

ಸತ್ಯವಾನ.—ಅಮ್ಮಾ, ಬಿಸಿಲಲ್ಲಿ ತಿರುಗಿದ್ದಕ್ಕೋ ಏನೋ ತಲೆನೋವು ಬಂತು. ಇಲ್ಲಿ ಮಲಗಿದೆ. ಚೆನ್ನಾಗಿ ನಿದ್ರೆಬಂತು. ಈಗ ಎದ್ದೆ. ದೇಹವು ಲಘುವಾಗಿದೆ. ನಿನ್ನ ಸೊಸೆ ಇಲ್ಲಿ ಇದ್ದಳಲ್ಲ. ಎಲ್ಲಿ?

ನಾರದ.—ಬಂದಳು.

(ಸಾವಿತ್ರಿ ಬರುವಳು. ಮೊದಲು ಪತಿಯು ಬಳಿಗೆ ಬಂದು ಕಾಲನ್ನು ಮುಟ್ಟಿ ನಮಸ್ಕಾರಮಾಡಿ ತಾಯನ್ನು)

ಸಾವಿತ್ರಿ.—ಅಮ್ಮಾ (ಎಂದು ಹೋಗಿ ಅಪ್ಪಿಕೊಳ್ಳುವಳು.)

ಮಾಳವಿ.—ನನ್ನಮ್ಮ (ಎಂದು ಅಪ್ಪಿ) ನಿಮ್ಮ ತಂದೆಯವರಿಗೆ ನಮಸ್ಕಾರ ಮಾಡು.

ಸಾವಿತ್ರಿ.—ಅಪ್ಪಾ (ಎಂದು ನಮಸ್ಕರಿಸುವಳು.)

ಅಶ್ವಪತಿ.—(ಆಶೀರ್ವಾದಮಾಡಿ) ಹಠದ ಹುಡುಗಿ, ಹಠದ ಹುಡುಗಿ. ನೀನದೆ ಎಲ್ಲರ ಹತ್ತಿರದಲ್ಲೂ ನಿನ್ನ ಹಠ ನಡೆಯುತ್ತದಲ್ಲ. ಅಪಲ್ಲವೆ. ಮಹ ರ್ಷಿಗಳಿಗೂ, ಅತ್ತೆ ಮಾವಂದಿರಿಗೂ ನಮಸ್ಕಾರಮಾಡು.

ಸಾವಿತ್ರಿ.—ಪೂಜ್ಯರಿಗೆ ವಂದಿಸುವೆನು. (ಎಂದು ಇಬ್ಬರಿಗೂ ನಮಸ್ಕಾರ ಮಾಡುವಳು.)

ನಾರದ.—ದೀರ್ಘಸುಮಂಗಲಿಯಾಗಿ ಬಾಳು. ತಾಯಿ.

ರಾಜ.—ಚಿರಕಾಲ ಸುಖಿಯಾಗಿ ಬಾಳು.

(ಕಂದ)

ದಿನಮಣಿಯಂ ಕತ್ತಲುಣಲ್
ದಿನಮಂತೆಯೆ ಸಾರಿ ತರುವುದೆಂತದ ಮುತ್ತಂ
ತಿಸಿಯನ ಜತೆಸಾರುತೆ ಮಿ
ಕ್ತಿನ ಬಾಯಿಂದವನ ಬಿಡಿಸಿ ತಂದೆಯ ಕಂದಾ ॥

ವೀರವನಿತಾಮಣಿ ವೀರರಾದ ಪುತ್ರರನ್ನು ಪಡೆದು ಸುಖಿ ಯಾಗಿರು.

(ಸಾವಿತ್ರಿ ಅತ್ತಗೆ ನಮಸ್ಕರಿಸುವಳು.)

ರಾಜಪತ್ನಿ.—ನಮ್ಮ ಮನೆಯ ಭಾಗ್ಯಲಕ್ಷ್ಮಿ. ಉರಿದಿದ್ದ ನನ್ನ ಹೊಟ್ಟೆಗೆ ತಂಪನ್ನು ತಂದೆ. ನಿನ್ನ ಹೊಟ್ಟೆಯ ಮಕ್ಕಳು ನಿನಗೆ ಚಿರಕಾಲ ಬಾಳಲಿ. ನಮ್ಮನ್ನೆಲ್ಲ ಆಮೇಲೆ ಕೇಳುವೆಯಂತೆ. ಅವನು ಕಾದಿ ದಾನೆ ನೋಡು. ಏಳುತ್ತಲೇ ನಿನ್ನನ್ನೇ ಕೇಳಿದನು. ಅಲ್ಲಿ ಹೋಗು

ಅಶ್ವಪತಿ.—ಇನ್ನು ಹೊರಡಬಹುದು.

ರಾಜ.—ಮಹರ್ಷಿಗಳೆ, ನಮಗೆಲ್ಲ ಇಂದು ಇಷ್ಟು ಆನಂದವನ್ನು ಹಿಂದಕ್ಕೆ ಕೊಟ್ಟ ಧರ್ಮದೇವರ ದರ್ಶನವನ್ನು ಮನಸ್ಸು ಅಪೇಕ್ಷಿಸುತ್ತದೆ.

ರಾಜಪತ್ನಿ.—ಏನು ಆ ಕೊಲೆಯ ದೇವರನ್ನು ನೋಡುವುದು. ಸುಮ್ಮನೆ ನಡೆಯಿರಿ.

ರಾಜ.—ದೇವೀ. ಇದೇನು, ನೀನು ಎಂದಿಗೂ ಹೀಗೆ ಮಾತನಾಡಿದ್ದಿಲ್ಲ.

ನಾರದ.—ಹೆತ್ತತಾಯಿಯ ಕೋಪ. ಇವನ್ನು ದೇವರು ಎಣಿಸುವುದೇ ಇಲ್ಲ. (ಎಂದು ಗಟ್ಟಿಯಾಗಿ) ಧರ್ಮದೇವ ನಿನ್ನನ್ನು ನೋಡಬೇಕೆಂದು ಕುತೂಹಲರಾಗಿರುವ ನಿನ್ನ ಭಕ್ತರ ಕಣ್ಣಿಗೆ ಒಮ್ಮೆ ಕಾಣಿಸು.

(ದೂರದಲ್ಲಿ ಧರ್ಮನು ಸಾವಧಾನವಾಗಿ ನಡೆಯುವುದು ಕಾಣುವುದು.)

ಸತ್ಯವಾನ.—ಈತನೇ ನನ್ನನ್ನು ನೋಡುತ್ತಿದ್ದದ್ದು.

ಸಾವಿತ್ರಿ.—(ಪತಿಯ ಕೈಹಿಡಿದು) ಧರ್ಮದೇವ, ಕೃಪಾಕರ, ದೀನಬಂಧು.

(ಎಂದು ಎಲ್ಲರೂ ಕೈಮುಗಿಯುವರು.)

ನಾರದ.—ದೇವದೇವ, ಈ ವೇಷವನ್ನು ಬಿಡಬಹುದಾದರೆ ಬಿಟ್ಟು ನಿನ್ನ ನಿಜವಾದ ಸ್ವರೂಪವನ್ನು ತೋರಿಸು.

(ಧರ್ಮನ ಹೊರಗಣ ಆಕಾರವು ಬಿದ್ದು ಹೋಗಿ ಒಳಗಡೆ ಮೂರು ಕಡೆಗೆ ಮೂರು ಆಕಾರವು ಕಾಣುವುದು.)

ರಾಜ.—ಈ ದೇವರು ಬ್ರಹ್ಮನೇ.

ಸತ್ಯವಾನ.—ಈತನು ವಿಷ್ಣುವು

ಅಶ್ವಪತಿ.—ಇವನು ಮಹೇಶ್ವರನು.

ನಾರದ.—ಈತನೇ ಎಲ್ಲವೂ.

ಸಾವಿತ್ರಿ.—(ಮುಂದಕ್ಕೆ ಬಂದು ನಮಸ್ಕಾರ ಮಾಡುತ್ತಾ) ದೇವದೇವ, ಎಲ್ಲವೂ ನೀನೇ ಆಗಿರುವಲ್ಲಿ ವಿಧಿ ಎಂದೂ ಅಧಿಕಾರವೆಂದು ಹೇಳುತ್ತಾ ವೈಧ

ವ್ಯದ ದುಃಖವನ್ನು ಲೋಕದಲ್ಲಿ ಏತಕ್ಕೆ ಇರಿಸುವೆ? (ದೇವರು ಮರೆಯಾಗುವನು.)

ನಾರದ.—ಪರಮಾತ್ಮನು ಮರೆಯಾದನು. ತಾಯಿ ಸಾವಿತ್ರಿ, ನೀನು ಕೇಳುವುದು ಇನ್ನೂ ಉತ್ತರವಿಲ್ಲದ ಪ್ರಶ್ನೆ. ಹೀಗೆಬಾ. ಅವನು ಎಷ್ಟು ತೋರುವನೋ ಅಷ್ಟು ಕೃಪೆಗೆ ಕೃತಜ್ಞರಾಗಿರೋಣ. (ಎಂದು ಭಜನೆ ಮಾಡುವನು.)

(ರಾಗ ಮಧ್ಯಮಾವತಿ.)

ಜಯಜೀಯಾ ಜಯಶ್ರೀಶಾ
ಜಯಲೋಕನಾಥ ಜಯ ಸರ್ವೇಶ ॥

ಲೋಕವನೆಲ್ಲವ ಸೃಷ್ಟಿಪೆನೀನು
ಲೋಕವನೆಲ್ಲವ ಪಾಲಿಪೆನೀನು
ಲೋಕವನೆಲ್ಲವ ಪೊಡೆಯೊಳು ಧರಿಸುವೆ
ಲೋಕನಾಥಜಯ ಜಯಸರ್ವೇಶಾ ॥

ವಾಯುನೀನೆ ಹರಿ ಅಗ್ನಿಯುನೀನೆ
ಆ ಯಮವರುಣ ನಿಋುಋುತಿಯು ನೀನೆ
ಕಾಯುವೀಶ್ವರನು ಇಂದ್ರನು ನೀನೇ
ಜೀಯ ನೀನೆ ಆಸಕಲದೇವತೆಯು ॥

ಸೊಲ್ಲಮೀರಿದನೆ ಭಾವದದೂರದ
ಎಲ್ಲೆಯಮೀರಿದ ಆತ್ಮದಾತ್ಮ
ಫುಲ್ಲಲೋಚನಾ ನಿನಗೆಕಾದಿರುವ
ಎಲ್ಲಲೋಕವನು ಭದ್ರದೆ ರಕ್ಷಿಸು ॥

(ಪರದೆ ಬೀಳುವುದು.)

ಸಂಪೂರ್ಣ.

———o———

೧. ಕೆಲವು ಸಣ್ಣಕತೆಗಳು.

"ಈ ಪುಸ್ತಕದಲ್ಲಿ ಮುಖ್ಯವಾಗಿ ವಿನೋದಕರವಾದ ಮತ್ತು ವ್ಯವಹಾರಜ್ಞಾನವನ್ನೊಳಗೊಂಡ ಹತ್ತುಕತೆಗಳುಂಟು. . ಕತೆಗಳನ್ನು ಹೇಳುವಲ್ಲಿ ಈ ಗ್ರಂಥಕಾರರು ನೈಪುಣ್ಯವನ್ನು ಚೆನ್ನಾಗಿ ವ್ಯಕ್ತಪಡಿಸಿರುವರು. . ಕನ್ನಡ ಭಾಷೆಯಲ್ಲಿ ಈ ಮಾದರಿಯ ಒಳ್ಳೆಯ ಕಥಾಪುಸ್ತಕಗಳನ್ನು ನಾವು ಪ್ರಾಯಕವಾಗಿ ನೋಡಿಲ್ಲ. ."—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.—**ಬೆಲೆ ರೂ. ೧-೦-೦.**

೨. ಬಿನ್ನಹ.

"ಇದೊಂದು ಅತ್ಯುತ್ತಮವಾದ ಗೀತಾವಳಿ. 'ನಿರೀಕ್ಷೆ', 'ವೈರಾಗ್ಯದಲ್ಲಿ', 'ದನಕಾಯುವ ಹುಡುಗರು' ಮೊದಲಾದ ಗೀತಿಕೆಗಳಲ್ಲಿ ತೋರಿ ಬರುವ ಕವಿಯ ಕಲ್ಪನಾಸಾಮರ್ಥ್ಯ ವರ್ಣನಾಚಾತುರ್ಯಾದಿಗಳು ಅಸಾಮಾನ್ಯವಾದವು. ಉದಾಹರಣರೂಪವಾಗಿ 'ನಿರೀಕ್ಷೆ'ಯ ಈ ನುಡಿಯನ್ನು ಇಲ್ಲಿ ಬರೆದಿರುತ್ತೇವೆ. . ಇಂತಹ ಮೃದುಮಧುರವಾದ ಮಾತುಗಳಿಂದ ಇಷ್ಟು ಲಲಿತವಾದ ಶೈಲಿಯಲ್ಲಿ ಪ್ರಕೃತಿಯ ಸೊಬಗನ್ನು ಕಣ್ಣಿಗೆ ಕಟ್ಟಿದಂತೆ ಇಷ್ಟು ಮನೋಹರವಾಗಿ ವರ್ಣಿಸುವ ಗೀತಿಕೆಗಳು ಕನ್ನಡ ಸಾಹಿತ್ಯದಲ್ಲಿ ಅಪೂರ್ವವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ."—ಟಿ.ಎಸ್.ವಿ. (ಬೆಂಗಳೂರು ಸೆಂಟ್ರಲ್ ಕಾಲೇಜ್ ಕನ್ನಡ ಲೆಕ್ಚರರ್ ಮ|| ರಾ|| ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಅವರು.)—**ಬೆಲೆ ಆಣೆ ೦-೫-೦.**

೩. ಶಾನ್ತಾ.

"ಈ ಸಣ್ಣ ದೃಶ್ಯಕ್ಕೆ ಋಷ್ಯಶೃಂಗೋಪಾಖ್ಯಾನವೇ ಕಥಾವಸ್ತು; ಆದರೆ ರಾಮಾಯಣದಲ್ಲಿ ಬರುವ ಉಪಾಖ್ಯಾನಕ್ಕೂ ಇಲ್ಲಿ ಕಂಡುಬರುವ ಕಥಾನಕಕ್ಕೂ ಕೆಲವು ವ್ಯತ್ಯಾಸಗಳಿವೆ. . ಈ ದೃಶ್ಯವು ಪ್ರಣಯನಿರೂಪಣದಲ್ಲಿ ಅಪೂರ್ವ ಚಮತ್ಕಾರವನ್ನೂ ಹೊಸ ಪರಿಯಕಾಂತಿಯನ್ನೂ ವ್ಯಕ್ತಪಡಿಸಿದೆಯೆಂದು ದೃಢವಾಗಿ ಹೇಳಬಹುದು. . . ."—ಪ್ರಬುದ್ಧ ಕರ್ಣಾಟಕ.—**ಬೆಲೆ ಆಣೆ ೦-೬-೦.**

ದೊರೆಯುವ ಸ್ಥಳಗಳು.—

ಮೆ|| ಎಂ. ಎಸ್. ರಾವ್ ಕಂಪೆನಿ, ಅವೆನ್ಯೂರೋಡ್
ಕರ್ಣಾಟಕ ಪ್ರಕಟನಾಲಯ, ಶಂಕರಪುರ
ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್

ಬೆಂಗಳೂರು.